ವಾರ್ಷಿಕ ಚಂದಾ:
ಸ್ಥಳೀಯರಿಗೆ
1 ವರ್ಷಕ್ಕೆ ರೂ. 6-00
6 ತಿಂಗಳಿಗೆ ರೂ. 3-00
ಪರಸ್ಥಳೀಯರಿಗೆ
1 ವರ್ಷಕ್ಕೆ ರೂ. 7-00
6 ತಿಂಗಳಿಗೆ ರೂ. 3-50

# ಪ್ರಭಾತ

ಬೆಲೆ: 12 ನ. ಪೈಸೆ.

ಸಂಪುಟ: ೨೮. ಸಂಚಿಕೆ: ೩೦ — 2—9—1962 — Vol. XXVIII. No. 30

# ಮುಂಬರುವ ನಗರಸಭಾ ಚುನಾವಣೆಗಳು

## ಎಲ್ಲ ವಾರ್ಡುಗಳಲ್ಲೂ ತೀವ್ರ ಸ್ಪರ್ಧೆಯಿರಬಹುದು

ಈ ವಾರ ತಿಳಿದುಬಂದಂತೆ, ಮಂಗಳೂರು ನಗರಸಭಾ ಚುನಾವಣೆಗಳಲ್ಲಿ ಜನಸಂಘವೂ ಬಲವಾದ ಸ್ಪರ್ಧೆ ಕೊಡಲಿದೆ. ಮಾರ್ಕೆಟ್, ಸೆಂಟ್ರಲ್, ಡೊಂಗರಕೇರಿ, ಕುದ್ರೋಳಿ ಮುಂತಾಗಿ ಹಲವು ವಾರ್ಡುಗಳಲ್ಲಿ ಜನಸಂಘವು ತನ್ನ ಹುರಿಯಾಳುಗಳನ್ನು ನಿಲ್ಲಿಸಲಿದೆ.

ಮಜೂರರು ಹೆಚ್ಚಿರುವ ವಾರ್ಡುಗಳಲ್ಲಿ, ಎಂದಿನಂತೆ, ಕಮ್ಯೂನಿಸ್ಟರು, ಕೊಂಗ್ರೆಸ್ಸಿಗೆ ಪ್ರಬಲ ವಿರೋಧಿಗಳಾಗಿರುವರು.

ನಗರಸಭೆಯ ಉಪಸ್ಥಿತ ಕಮ್ಯೂನಿಸ್ಟ್ ಸದಸ್ಯರು ಎಲ್ಲರೂ ಈ ಬಾರಿ ಸ್ಪರ್ಧಿಸುವರೆಂದು ಕೇಳುತ್ತೇವೆ. ಕಳೆದ ಬಾರಿಗಿಂತಲೂ ಇವರಿಗೆ, ಈ ಬಾರಿ, ಅಧಿಕ ಮತದಾರರ ಬೆಂಬಲ ದೊರೆವ ಭರವಸೆಯಿದೆ. ಈ ಎಲ್ಲ ಕಮ್ಯೂನಿಸ್ಟ್ ಸದಸ್ಯರೂ, ತಮ್ಮ ಸದಸ್ಯತನದ ಅವಧಿಯಲ್ಲಿ, ತಂತಮ್ಮ ವಾರ್ಡುಗಳಲ್ಲಿನ ಸೌಕರ್ಯಗಳನ್ನು ಹೆಚ್ಚಿಸಲಿಕ್ಕೆ ವಿಶೇಷವಾಗಿ ನಳ್ಳಿನೀರು ಸರಬರಾಯಿ ಮತ್ತು ವಿದ್ಯುದ್ದೀಪಗಳಿಗೆ, ಹಾರ್ದಿಕವಾಗಿ ಶ್ರಮಿಸಿರುವರು ಎಂದು ಹಲವು ಮತದಾರರ ಅಭಿಪ್ರಾಯವಿದೆ.

ಆದರೆ, ಇಂಥ ತೃಪ್ತಿಯು ಇತರ ವಾರ್ಡುಗಳಲ್ಲೂ ಇಲ್ಲವೇ-ಎಂದು ಕೇಳಲಾಗುತ್ತಿದೆ. ಎಲ್ಲ ವಾರ್ಡುಗಳ ಅಭಿವೃದ್ಧಿಯಲ್ಲಿ ಏಕರೀತಿಯ ನ್ಯಾಯವನ್ನು ಅನುಸರಿಸಲಾಗಿದೆ ಎಂದು, ನಗರದಲ್ಲಿನ ಸುಧಾರಣೆಗಳನ್ನು ಪ್ರತ್ಯಕ್ಷ ಕಂಡವರಿಗೆ ಅರಿವಾಗದೆ ಇರದು.

### ಆಗಿರುವ ಸುಧಾರಣೆಗಳು

ಒಂದೆರಡು ವರ್ಷಗಳ ಹಿಂದೆ ನಾವು, ಬೋಳಾರ, ಬಿಜೈ, ಬ್ಯಾರಿಪಳ್ಳಿ ಮೊದಲಾದ ಕಡೆಗಳಲ್ಲಿ, ನಿರಾತಂಕವಾಗಿ ನಡೆದುಹೋಗಲಾಗದಂಥ ಏರು ತಗ್ಗಾದ ಮತ್ತು ಮಳೆಗಾಲದಲ್ಲಿ ಕಟಿ ತುಂಬ ನೀರು ಹರಿವ ಓಣಿಗಳನ್ನು ಈಗಿನ ಕೌನ್ಸಿಲು-ಸಮತಟ್ಟಾಗಿ ಮಾಡಿ, ಕಲ್ಲುಗಳನ್ನು ಹಾಸಿ, ದೀಪಗಳನ್ನಿರಿಸಿ ಸುಗಮವಾಗಿ ಮಾಡಿಕೊಡಿಸಿದುದರ ಕುರಿತು ಉಲ್ಲೇಖಿಸಿದ್ದೆವು. ಅಂದಿನಿಂದ ಈ ವರೆಗೆ ಮತ್ತೆ ಕೆಲವು ದುರಸ್ತಿಗಳಾಗಿವೆಯಾದರೂ, ಇನ್ನೆಷ್ಟೋ ಇಂಥ ಕಾಮಗಾರಿಗಳು ಹಾಗೇ ಉಳಿದುಕೊಂಡಿವೆ. ಇನ್ನು ನಗರದ ನಡುವಿನ ಅನೇಕ ಕಡೆಗಳಲ್ಲಿ ಕಸಕುಪ್ಪೆಗಳು ಕೊಳೆತು ನಾರುವುದನ್ನು ವಾರಗಟ್ಟಲೆ ತೆಗೆಸಲಾಗದಂಥ ಅಸಹಾಯಕ ಸ್ಥಿತಿಯೂ ಕಂಡು ಬರುತ್ತದೆ.

ಈಗಿನ ಕೌನ್ಸಿಲಿನ ಅಧಿಕಾರಾವಧಿಯಲ್ಲಿ ವಿದ್ಯುದ್ದೀಪಗಳು ಹೆಚ್ಚಿಸಲ್ಪಟ್ಟಿವೆ. ರಸ್ತೆಗಳ ಸಂಗಮಗಳಲ್ಲಿ ದೀಪಾಲಂಕಾರಗಳಿವೆ, ಟ್ಯೂಬ್‌ಲೈಟುಗಳು ಬೆಳಗುತ್ತಿವೆ. ಹೆಚ್ಚಿನ ರಸ್ತೆಗಳು ಸ್ವಚ್ಛತೆ ತೋರುತ್ತಿವೆ. ಅನೇಕ ರಸ್ತೆಗಳು ಅಗಲಗೊಳಿಸಲ್ಪಟ್ಟಿವೆ. ಕೇಂದ್ರ ಮೈದಾನಿನ ಸುತ್ತಲೂ ರಸ್ತೆಗಳು ಅಗಲಗೊಂಡಿವೆ.

### ಹೊಸ ಮಾರ್ಕೆಟ್

ವೆಬ್‌ಸ್ಟರ್ ಮಾರ್ಕೆಟನ್ನು ಆಧುನಿಕ ರೀತಿಯಲ್ಲಿ ಕಟ್ಟಿಸುವ ಗೊತ್ತುವಳಿಯು, ಈ ಮೊದಲಿನ ಕೌನ್ಸಿಲಿನಲ್ಲೇ ಆಗಿತ್ತು. ಅದೀಗ ಕಾರ್ಯಗತಗೊಳಿಸಲ್ಪಡುತ್ತಿದೆ. ಕೆಲವೇ ತಿಂಗಳುಗಳಲ್ಲಿ, ಈ ಹೊಸ ಮಾರ್ಕೆಟಿನ ಎರಡು ವಿಭಾಗಗಳು ಪೂರ್ಣವಾಗುವುವೆಂದು ಕೇಳುತ್ತೇವೆ.

### ಪುರಭವನ

ಪುರಭವನದ ರಚನೆಯು, ಈ ಕೌನ್ಸಿಲಿನ ಕಾರ್ಯನೈಪುಣ್ಯದ ಒಂದು ಉದಾಹರಣೆ. ಪುರಭವನ ರಚನೆಯಾಗಬೇಕೆಂಬ ನಾಗರಿಕರ ಆಕಾಂಕ್ಷೆಯು ಇಪ್ಪತ್ತೈದು ವರ್ಷಗಳಿಗೂ ಹಿಂದಿನದು. ಕಳೆದ ಆ ಕಾಲು ಶತಮಾನದಲ್ಲಿ ಯುದ್ಧಕಾಲದ 4-5 ವರ್ಷಗಳನ್ನು ಬಿಟ್ಟರೆ, ಉಳಿದ ವರ್ಷಗಳಲ್ಲಿ ಪ್ರತಿಯೊಂದು ಕೌನ್ಸಿಲಿನ ಅಧಿಕಾರಾವಧಿಯಲ್ಲಿ ಈ ವಿಷಯವು ಚರ್ಚಿಸಲ್ಪಟ್ಟಿತ್ತು. ಕೆಲವೊಮ್ಮೆ, ಇದು ಕಾರ್ಯಗತವಾಗುವುದೆಂದೂ ಆಸೆ ತೋರಿತ್ತು. ಶ್ರೀ ಸೂರ್ಯನಾರಾಯಣ ಅಡಿಗರವರು ಚೆಯರ್ಮನರಾಗಿದ್ದಾಗ, ಯೋಗ್ಯ ಸ್ಥಳದ ಅನ್ವೇಷಣೆಯೂ ನಡೆದಿತ್ತು. ಕೊನೆಗೆ, ಬಾವಟೆಗುಡ್ಡದ ಮೇಲೆ ಒಂದು ಸ್ಥಳವು ಯೋಗ್ಯವೆಂದು ಕಂಡು ಆ ಬಗ್ಗೆ ಯತ್ನ ನಡೆಯಿತು; ಅದು ಸಫಲವಾಗಲಿಲ್ಲ. ಈಗಿನ ಕೌನ್ಸಿಲು, ಕೊನೆಗೆ ಅವಿರತ ಯತ್ನ ನಡೆಸಿ, ಕೇಂದ್ರ ಮೈದಾನಿನಲ್ಲೇ ಇದನ್ನು ಕಟ್ಟಿಸುವ ನಿರ್ಧಾರ ಮಾಡಿತು. ಈಗ, ಭವ್ಯ ಪುರಭವನವು ಏಳುತ್ತಿದೆ. ಇದೇ ದಶಂಬರ ತಿಂಗಳೊಳಗೆ ಇದರ ಕೆಲಸವು ಪೂರ್ಣವಾಗಬಹುದೆಂದು ನಿರೀಕ್ಷಿಸಲಾಗಿದೆ. ಭವನವು, ಬೆಂಗಳೂರಿನ ಸರ್. ಪುಟ್ಟಣ್ಣ ಚೆಟ್ಟಿ ಭವನದ ಮಾದರಿಯಲ್ಲಿ ರಚಿಸಲ್ಪಡುತ್ತಿದೆ.

ಈ ಕೌನ್ಸಿಲು ಏನನ್ನೆಲ್ಲ ಸಾಧಿಸಿದೆ ಎಂಬುದನ್ನು ನಗರಸಭಾಧಿಪತಿಗಳು ಈ ಮೊದಲು ಒಂದೆರಡು ಬಾರಿ, ಪತ್ರಿಕೋದ್ಯಮಿಗಳ ಮುಂದೆ ವಿವರಿಸಿದ್ದಾರೆ. ಸುರತ್ಕಲ್‌ದಿಂದ ಕೋಟೆಕಾರು ವರೆಗೆ ಬೃಹತ್ ಮಂಗಳೂರನ್ನು ವಿಸ್ತರಿಸುವ ಯೋಜನೆಯನ್ನೂ ತಿಳಿಸಿದ್ದಾರೆ. (ಕ್ಷೀರಕ್ಷೇತ್ರ ಮುಂತಾದ ಅವರ ಯೋಜನೆಗಳು ಇನ್ನು ಕಾರ್ಯರೂಪಕ್ಕೆ ಬರಬೇಕಾಗಿವೆ.) ಹೀಗೆ, ಶ್ರೀ ಮಣೇಲ ಶ್ರೀನಿವಾಸ ನಾಯ್ಕರವರು, ನಗರಸಭಾಧಿಪತಿಗಳಾಗಿರುವ ತಮ್ಮ ಅಧಿಕಾರಾವಧಿಯಲ್ಲಿ ಗಮನೀಯ ಸುಧಾರಣೆಗಳೂ ಅಭಿವೃದ್ಧಿಯೂ ಉಂಟಾಗಿದೆ. ಶ್ರೀ ನಾಯ್ಕರು ಈ ಬಾರಿ ಚುನಾವಣೆಗೆ ನಿಲ್ಲುವುದಿಲ್ಲವೆಂದು ನಿರ್ಧರಿಸಿರುವುದು ಅನೇಕರಿಗೆ ಆಶ್ಚರ್ಯವುಂಟುಮಾಡಿದೆ. ಇಂಥ ಕಾರ್ಯನಿಪುಣರೂ, ಅವಿಶ್ರಾಂತವಾಗಿ ಸೇವೆಸಲಿಸಿದವರೂ ಈಗ—ನಮ್ಮ ನಗರಸಭೆಯಿಂದ ದೂರ ಉಳಿಯುವರು ಎಂಬುದು ಸಂತೋಷದ ವಿಷಯವಲ್ಲ.

ಕೊಂಗ್ರೆಸ್ ಪಕ್ಷದ ಪರವಾಗಿ, ನಗರಸಭೆಯಲ್ಲಿ ನಾಯಕತ್ವವನ್ನು ವಹಿಸುವ ಸಕಲ ಅರ್ಹತೆಗಳುಳ್ಳ, ಕುಶಾಗ್ರಮತಿಗಳೂ ಅನುಭವಿಗಳೂ ಆಗಿರುವ ಶ್ರೀ ಕೆ ಸೂರ್ಯನಾರಾಯಣ ಅಡಿಗರವರು ಈ ಬಾರಿ ಚುನಾವಣೆಗೆ ಇಳಿವರೇ ಎಂಬೊಂದು ಪ್ರಶ್ನೆಯೆದ್ದಿತ್ತು. ನಮಗೆ ತಿಳಿದುಬಂದಂತೆ, ಈ ವರೆಗೆ ಶ್ರೀ ಅಡಿಗರವರು ಚುನಾವಣೆಗೆ ನಿಲ್ಲಲು ಒಪ್ಪಿಗೆ ಕೊಟ್ಟಿಲ್ಲ.

ಶ್ರೀ ಜಿ. ಸೋಮಶೇಖರರಾಯರು, ತರುಣರಿಗೆ ದಾರಿ ಮಾಡಿಕೊಡಲು ತಾನು ಈ ಬಾರಿ ಚುನಾವಣೆಗೆ ನಿಲ್ಲುವುದಿಲ್ಲವಾಗಿ ಹೇಳಿರುವರಾಗಿ ಕೇಳುತ್ತೇವೆ.

ಈ ಹಿನ್ನೆಲೆಯಲ್ಲಿ ನೋಡುತ್ತ, ಈ ಬಾರಿ, ಕೊಂಗ್ರೆಸ್ ಪರವಾಗಿ ಧುರೀಣತ್ವ ವಹಿಸುವ ಹೊಸಬರಾರು ಎಂಬ ಪ್ರಶ್ನೆ ಎದ್ದಿದೆ ನಗರಸಭಾಧಿಪತಿ ಯಾರೆಂಬುದನ್ನು ಚಿತ್ರಿಸಿಕೊಂಡು, ಆ ಆಯ್ಕೆಯ ಸುತ್ತಲೂ ಇತರ ಸದಸ್ಯರ ಆಯ್ಕೆಯೂ ವ್ಯವಸ್ಥೆಗೊಳಿಸಲ್ಪಡುತ್ತದೆ.

(ಮುಂದುವರಿಯುವದು.)

—

### ನವಂಬರದಲ್ಲಿ ಮಾವಿನ ಹಣ್ಣು

ರತ್ನಗಿರಿ ಜಿಲ್ಲೆಯ ಕೆಲವು ಎಡೆಗಳಲ್ಲಿ ಕಾವುಳ್ಳ ಹವೆಯ ಕಾರಣದಿಂದ ಮಾವಿನ ಮರಗಳು ಹೂಬಿಡಲಾರಂಭಿಸಿವೆ. ಇನ್ನು ಪ್ರತಿಕೂಲ ಹವೆಯುಂಟಾಗಿ ಹೂವುಗಳು ಉದುರದಿದ್ದ ಪಕ್ಷದಲ್ಲಿ, ನವಂಬರದಲ್ಲೇ ಮಾವಿನ ಹಣ್ಣುಗಳು ದೊರೆಯಬಹುದು.

ಲೇಖಾಂಕ ೭೭.

# ಮಹಾಭಾರತ ಕಥಾಮೃತ

(ಲೇಖಕ: ಶ್ರೀ ಕೋ. ಶ. ಕಾರಂತ, ಬಿ.ಎ., ಬಿ.ಎಲ್., ಎಡ್ವೊಕೇಟ್, ಮಂಗಳೂರು.)

## ನಳೋಪಾಖ್ಯಾನ

### ೮. ದಮಯಂತಿಯ ದ್ವಿತೀಯ ಸ್ವಯಂವರ

ಸುದೇವನಿಂದ ದಮಯಂತಿಯ ದ್ವಿತೀಯ ಸ್ವಯಂವರದ ವಿಚಾರವನ್ನು ತಿಳಿದ ಋತುಪರ್ಣನು ಬಾಹುಕನನ್ನು ಕರೆದು ಇಂತೆಂದನು, "ಬಾಹುಕ! ನೀವು ಅಶ್ವವಿದ್ಯೆಯಲ್ಲಿ ಬಹಳ ನಿಪುಣನೆಂಬುದರ ಪರೀಕ್ಷೆಯ ಕಾಲವು ಬಂದಿದೆ. ವಿದರ್ಭ ದೇಶದ ರಾಜಧಾನಿಯಲ್ಲಿ ದಮಯಂತಿಗೆ ಎರಡನೆಯ ಸ್ವಯಂವರದ ಆಮಂತ್ರಣ ಬಂದಿದೆ. ಒಂದು ದಿನ ಮಾತ್ರ ಉಳಿದಿದೆ? ಆದ್ದರಿಂದ ಶೀಘ್ರ ಗಮನವಿರುವ ಅಶ್ವಗಳನ್ನು ಆರಿಸಿ ರಥವನ್ನು ಸಿದ್ಧಪಡಿಸುವವನಾಗು."

ಈ ಮಾತನ್ನು ಕೇಳಿ ನಳನಿಗೆ ಸಿಡಿಲು ಬಡಿದಂತಾಯಿತು. "ಏನು? ದಮಯಂತಿಗೆ ದ್ವಿತೀಯ ಸ್ವಯಂವರವೇ? ಅಥವಾ ದುಃಖದಿಂದ ಕಂಗೆಟ್ಟು ನನ್ನನ್ನು ಪಡೆಯಲು ಈ ಉಪಾಯವಿರಬಹುದೆ? ಸಂಸಾರದಲ್ಲಿ ಸ್ತ್ರೀಯರ ಚಂಚಲಚಿತ್ತವು ಪ್ರಸಿದ್ಧ. ನನ್ನ ಅಪರಾಧವು ಅಕ್ಷಮ್ಯವಾದರೂ ಅವಳು ಇಂತಹ ಕಾರ್ಯಕ್ಕೆ ಮನಗೊಂಡಳೆ? ಈ ವಿಚಾರ ಸುಳ್ಳೇ ಇರಬೇಕು. ಏನಿದ್ದರೂ ಇದರ ನಿಶ್ಚಿತಾರ್ಥವನ್ನು ಹೋಗಿ ತಿಳಿಯುವೆನು" ಎಂದು ಚಿಂತೆಗೆ ತುತ್ತಾಗಿ ನಳನು ಅಶ್ವಾಲಯವನ್ನು ಸೇರಿದನು. ಅಶ್ವಗಳನ್ನು ಪರೀಕ್ಷಿಸುತ್ತ, ದೇಹದಲ್ಲಿ ಕೃಶವಿರುವ ನಾಲ್ಕು ಅಶ್ವಗಳನ್ನು ಆರಿಸಿ ರಥಕ್ಕೆ ಕಟ್ಟಿದನು.

ಕುದುರೆಗಳನ್ನು ನೋಡಿ ಋತುಪರ್ಣನು ಸ್ವಲ್ಪ ಕೋಪಗೊಂಡು "ಏನು ನನ್ನನ್ನು ಮೋಸಗೊಳಿಸುವುದಕ್ಕಾಗಿ ಇಂತಹ ಕ್ಷೀಣವಿರುವ ಅಶ್ವಗಳನ್ನು ಏಕೆ ತಂದಿರುವಿ? ಇವು ಎಷ್ಟು ದೂರ ಹೋಗಬಲ್ಲವು?

ಬಾಹುಕನು,

ಏಕೋ ಲಲಾಟೇ
ದ್ವೌ ಮೂರ್ಧ್ನಿ ದ್ವೌ ದ್ವೌ
ಪಾರ್ಶ್ವೋಪಪಾರ್ಶ್ವಯೋಃ ।
ದ್ವೌ ದ್ವೌ ವಕ್ಷಸಿ ವಿಜ್ಞೇಯೋ
ಪ್ರಯಾಣೇ ಚೈಕ ಏವ ತು
॥ ಅ. ೭೧-೧೬ ॥

ರಾಜನ್! ಹಣೆಯಲ್ಲಿ ಒಂದು, ಶಿರಸ್ಸಿನಲ್ಲಿ ಎರಡು, ಪಾರ್ಶ್ವದಲ್ಲಿ ಎರಡು, ಉಪಪಾರ್ಶ್ವದಲ್ಲಿ ಎರಡು, ಎದೆಯಲ್ಲಿ ಎರಡೆರಡು ಹಿಂಭಾಗದಲ್ಲಿ ಒಂದು–ಈ ಪ್ರಕಾರ ಹನ್ನೆರಡು ಸುಳಿಗಳಿರುವ (Curls) ಅಶ್ವಗಳು ಪ್ರಯಾಣಕ್ಕೆ ಯೋಗ್ಯವಾಗಿವೆ. ಇವು ವಿದರ್ಭ ದೇಶವನ್ನು ಸೇರಲು ಸಮರ್ಥವಾಗಿವೆ. ಆದರೆ ತಮಗೆ ಅಸಮ್ಮತವಿರುವುದಾದರೆ, ನೀವೇ ಆರಿಸಿರಿ. ಅವುಗಳನ್ನು ಜೋಡಿಸುವೆನು" ಎಂದು ಬಾಹುಕನು ನಿವೇದಿಸಿದನು.

"ಬಾಹುಕ! ನೀನು ಅಶ್ವವಿದ್ಯೆಯ ತತ್ವಜ್ಞನಿರುವಿ. ಆದ್ದರಿಂದ ನಿನ್ನ ಇಷ್ಟವಿದ್ದಂತೆ ಇರಲಿ" ಎಂದು ಋತುಪರ್ಣನು ನುಡಿದು ರಥವೇರಿದನು. ವಾರ್ಷ್ಣೇಯ ಸಾರಥಿಯೂ ಕುಳಿತನು. ಅಶ್ವಗಳು ಜಿಗಿದು ವಾಯುವೇಗದಿಂದ ಧಾವಿಸಿದವು. ಅಯೋಧ್ಯಾ ನಗರವಾಸಿಗಳು ಅಶ್ವಗಳ ಗಮನವನ್ನು ನೋಡಿ ಬೆರಗಾದರು. ಮಹಾರಾಜ ಋತುಪರ್ಣನು ಬಾಹುಕನ ಅಶ್ವಸಂಚಾಲನೆಯ ಚಮತ್ಕಾರವನ್ನು ನೋಡಿ ಪ್ರಸನ್ನನಾದನು. ವಾಯುವಿನ ರಭಸದಿಂದ ಮಹಾರಾಜನ ಉತ್ತರೀಯವು ಹಾರಿ ಮಾರ್ಗದಲ್ಲಿ ಬಿದ್ದುಬಿಟ್ಟಿತು. "ಮಹಾಮತೇ ಬಾಹುಕ! ಅಶ್ವಗಳನ್ನು ಹಿಡಿದು ನಿಲ್ಲಿಸು. ನಮ್ಮ ಉತ್ತರೀಯ ಹಾರಿ ಮಾರ್ಗದಲ್ಲಿ ಬಿದ್ದಿದೆ. ಸಾರಥಿಯು ಹೋಗಿ ತರಲಿ" ಎಂದು ಋತುಪರ್ಣನು ನುಡಿದನು.

ರಾಜನ ಮಾತನ್ನು ಕೇಳಿ ಬಾಹುಕನು, "ಮಹಾರಾಜ! ನಿಮ್ಮ ವಸ್ತ್ರವು ಬಿದ್ದ ಸ್ಥಳ ನಾಲ್ಕು ಯೋಜನಕ್ಕೂ ಹಿಂದಾಗಿದೆ ಆದ್ದರಿಂದ ಅದನ್ನು ತರುವುದು ಅಸಾಧ್ಯವಾಗಿದೆ."

ರಾಜನು ಆಶ್ಚರ್ಯಗೊಂಡು ಪ್ರತಿ ನುಡಿಯಲಿಲ್ಲ. ಮಾರ್ಗದ ಬಳಿಯಲ್ಲಿರುವ ಒಂದು ಮರವನ್ನು ನೋಡಿ ಋತುಪರ್ಣನು, "ಬಾಹುಕ, ನೋಡು! ಸಂಖ್ಯಾಪರಮಶಕ್ತಿ ನನ್ನಲ್ಲಿದೆ. ಈ ಜ್ಞಾನವು ಇನ್ನಾರಿಗೂ ಇರುವುದಿಲ್ಲ. ಆ ಮರದಲ್ಲಿ ಎಷ್ಟು ಎಲೆ ಎಷ್ಟು ಹಣ್ಣುಗಳಿವೆ ಎಂದು ನನಗೆ ತಿಳಿದಿದೆ. ಮರದಡಿಯಲ್ಲಿ ಬಿದ್ದಿರುವ ಎಲೆ ಮತ್ತು ಹಣ್ಣುಗಳಿಗಿಂತ ಮರದಲ್ಲಿರುವ ಎಲೆ ಮತ್ತು ಹಣ್ಣುಗಳಿಗಿಂತ ನೂರೊಂದು ಹೆಚ್ಚಿಗಿವೆ. ಆ ಎರಡು ಶಾಖೆಯಲ್ಲಿ ಐದು ಕೋಟಿ ಎಲೆಗಳಿವೆ ಮತ್ತು ಎರಡು ಸಾವಿರದ ತೊಂಬತ್ತೈದು ಹಣ್ಣುಗಳಿವೆ. ಕೆಳಗಿಳಿದು ಪರೀಕ್ಷೆ ಮಾಡುವವನಾಗು ಎಂದು ರಾಜನು ತನ್ನ ಪಾಂಡಿತ್ಯವನ್ನು ಪ್ರದರ್ಶಿಸಿದನು.

ರಾಜನ ಮಾತನ್ನು ಕೇಳಿ ಬಾಹುಕನು ರಥವನ್ನು ನಿಲ್ಲಿಸಿ, "ನಿಮಗೆ ಸಂಖ್ಯಾಜ್ಞಾನವಿದೆ ನಾನು ಆ ವೃಕ್ಷವನ್ನು ಕಡಿದು ಅದರ ಎಲೆ ಫಲಗಳನ್ನು ಎಣಿಸುವೆನು. ವಾರ್ಷ್ಣೇಯನು ಅಶ್ವಗಳ ವಾಜಿಯನ್ನು (ಲಗಾಮು) ಹಿಡಿದಿರಲಿ" ಎಂದನು.

'ವಿಳಂಬ ಮಾಡುವುದಕ್ಕೆ ಸಮಯವಿಲ್ಲ' ಎಂದು ರಾಜನು ನುಡಿದನು. ಆ ಮಾತಿಗೆ ಬಾಹುಕನು, "ನಾನು ಮುಹೂರ್ತದಲ್ಲಿ ಎಣಿಸುವೆನು. ಆದರೆ ನಿಮಗೆ ತೀವ್ರವಾಗಿ ಹೋಗಲೇಬೇಕೆಂತಿದ್ದರೆ, ವಾರ್ಷ್ಣೇಯನು ರಥವನ್ನು ಸಾಗಿಸಲಿ."

"ಬಾಹುಕ! ನೀನಲ್ಲದೆ ಅನ್ಯರಿಂದ ಈ ಅಶ್ವಗಳನ್ನು ನಡೆಯಿಸುವವರು ಈ ಧರಿತ್ರಿಯಲ್ಲಿ ಇಲ್ಲವು ನೀನೇ ಪ್ರಯತ್ನಪೂರ್ವಕ ರಾಜಧಾನಿಗೆ ಮುಟ್ಟಿಸಬೇಕು. ಸೂರ್ಯೋದಯಕ್ಕೆ ಮೊದಲು ನಾವು ವಿದರ್ಭ ರಾಜಧಾನಿಯನ್ನು ಸೇರಲೇಬೇಕು.

"ಫಲಪತ್ರಗಳನ್ನು ಎಣಿಸದೆ ನಾನು ಹೋಗುವಂತಿಲ್ಲ" ಎಂದು ಬಾಹುಕನು ಹೇಳಲಾಗಿ ರಾಜನು ಸಮ್ಮತಿಸಿದನು. ಆ ಮೇಲೆ ಬಾಹುಕನು ರಥದಿಂದ ಇಳಿದು ಮರವನ್ನು ಕಡಿದನು. ಫಲಪತ್ರಗಳನ್ನು ಎಣಿಸಿದನು. ಅವನು ವಿಸ್ಮಯಗೊಂಡು, "ರಾಜ! ನಿಮ್ಮಲ್ಲಿ ಗಣಿತ ಅದ್ಭುತಶಕ್ತಿಯನ್ನು ನಾನು ಪರೀಕ್ಷಿಸಿದಂತಾಯಿತು. ನೀವು ಹೇಳಿರುವ ಸಂಖ್ಯೆಯ ಪತ್ರಫಲಗಳು ಮಾತ್ರ ಇವೆ. ಈ ವಿದ್ಯೆಯನ್ನು ನನಗೆ ಉಪದೇಶಿಸಬೇಕಾಗಿ ಪ್ರಾರ್ಥಿಸುತ್ತೇನೆ. ನಾನು ನಿಮಗೆ ಅಶ್ವವಿದ್ಯೆಯ ರಹಸ್ಯವನ್ನು ಉಪದೇಶಿಸುವೆನು" ಎಂದು ಬಾಹುಕನು ನಿವೇದಿಸಿದನು.

"ತಥಾಸ್ತು! ನೀನು ನನ್ನಿಂದ ಅಕ್ಷವಿದ್ಯಾಹೃದಯವನ್ನು ಪಡೆದು ನನಗೆ ಅಶ್ವಹೃದಯವನ್ನು ಉಪದೇಶಿಸುವವನಾಗು" ಎಂದು ಋತುಪರ್ಣನು ನಳನಾದ ಬಾಹುಕನಿಗೆ ಉಪದೇಶಿಸಿ, ಉಪದೇಶವನ್ನು ಪಡೆದನು.

ನಳನು ದ್ಯೂತವಿದ್ಯೆಯ ದೀಕ್ಷೆಯನ್ನು ಪಡೆದುದ್ದೇ ತಡ, ನಳನ ಶರೀರದಲ್ಲಿ ಅಡಗಿದ್ದ, ಕಾರ್ಕೋಟಕನ ವಿಷದ ಜ್ವಾಲೆಯಿಂದ ದಹಿಸುತ್ತಿದ್ದ ಕಲಿಯು ಹೊರಗೆ ಬಂದು ಸ್ವರೂಪದಲ್ಲಿ ಪ್ರಕಟನಾದನು. ನಳನು ಕಲಿಗೆ ಶಾಪಕೊಡಬೇಕೆಂದಿರುವುದನ್ನು ತಿಳಿದು ಈ ಪ್ರಕಾರ ವಿಜ್ಞಾಪಿಸಿದನು: "ರಾಜ! ನಿಮ್ಮ ಶರೀರದಲ್ಲಿ ಅತ್ಯಂತ ದುಃಖದಿಂದ ನರಳುತ್ತಿದೆ. ನಾನು ಕಾರ್ಕೋಟಕನ ವಿಷದ ಜ್ವಾಲೆಯಿಂದ ಅನುದಿನವೂ ದಹಿಸುತ್ತಿದ್ದೆನು. ನಿಮ್ಮನ್ನು ಶರಣಾಗತನಾಗಿರುವೆನು. ಆದ್ದರಿಂದ ನನ್ನನ್ನು ನೀವು ಶಪಿಸಬಾರದೆಂದು ಬೇಡುತ್ತೇನೆ" ನಳನು ಅಭಯವನ್ನಿತ್ತನು. ಆ ಮೇಲೆ ಕಲಿಯು ಅದೃಶ್ಯನಾದನು. ನಿಷಧ ನರೇಶನಾದ ನಳನು ಪ್ರಾಪ್ತವಾದ ಚಿಂತೆಯಿಂದ ಮುಕ್ತನಾದನು. ಪ್ರಸನ್ನಚಿತ್ತನಾಗಿ ರಥವನ್ನೇರಿ ಅಶ್ವಗಳನ್ನು ನಡೆಯಿಸಲಾರಂಭಿಸಿದನು. ತನ್ನ ವಚನದಂತೆ ಬಾಹುಕನು ಸಂಧ್ಯಾಕಾಲದಲ್ಲಿಯೇ ವಿದರ್ಭ ರಾಜಧಾನಿಯನ್ನು ಸೇರಿದನು.

—೦—

# ಪ್ರಭಾತ

ಸಂಪುಟ: ೨೮. ಸಂಚಿಕೆ: ೩೦. 2-9-1962 Vol. XXVIII. No.30.

## ಕಲಬೆರಕೆ

ಕೃತ್ರಿಮ ಔಷಧಿಗಳಂತೆ ಆಹಾರ ಸಾಮಗ್ರಿಗಳಲ್ಲೂ ಕಲಬೆರಕೆ ಹೆಚ್ಚುತ್ತಿದೆ. ಬಹುಶಃ ಆಹಾರಸಾಮಗ್ರಿಗಳ ಕಲಬೆರಕೆಯ ಪರಿಪಾಠವು, ಕೃತಕ ಔಷಧಿ ತಯಾರಿಗಿಂತಲೂ ಹಿಂದಿನಿಂದ ಬೆಳೆದುಬಂದುದು. ಇಂಥ ಕಲಬೆರಕೆಗಳು, ತೆತ್ತ ಹಣಕ್ಕೆ ಶುದ್ಧ ವಸ್ತುಗಳನ್ನು ಪಡೆಯಲಾಗದ ನಷ್ಟವಲ್ಲದೆ, ಆರೋಗ್ಯದ ಮೇಲೂ ದುಷ್ಪರಿಣಾಮ ಮಾಡುವುವು. ಸರಕಾರವು ಈ ಚಾಳಿಯನ್ನು ಹತ್ತಿಕ್ಕಲು ಕಾನೂನುಗಳನ್ನು ರಚಿಸಿದ್ದರೂ ಕಲಬೆರಕೆಯೂ ಹೆಚ್ಚುತ್ತ ನಡೆದಿದೆ. ಮದರಾಸು ರಾಜ್ಯದಲ್ಲಿ ಆಹಾರ ವಸ್ತುಗಳಲ್ಲಿ ಬೆರಕೆಮಾಡಲು ಅವಶ್ಯವಿರುವ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳೇ ಇವೆಯೆಂದು ಬಯಲಾಗಿದೆ. ಉತ್ತರಪ್ರದೇಶದ ಸರಕಾರವೀಗ, ಆ ಪ್ರದೇಶದಲ್ಲಿನ ಕಲಬೆರಕೆಗಳ ಕುರಿತು ಯೋಚನೆಗೀಡಾಗಿದೆ. ತಪ್ಪಿತಸ್ಥರನ್ನು ವಿಚಾರಣೆಗೊಳಪಡಿಸಿದಾಗ ಬೆದರಿಕೆ ಹುಟ್ಟುವಂಥ ಶಿಕ್ಷೆ ವಿಧಿಸಲ್ಪಡುತ್ತಿಲ್ಲವೆಂದೂ ಹೇಳಲಾಗುತ್ತಿದೆ— ಮತ್ತು ಈ ಕಾರಣದಿಂದಲೂ ಕಲಬೆರಕೆಯ ದುಶ್ಚಟವು ಹೆಚ್ಚಲು ಕಾರಣವಾಗುತ್ತಿದೆಯೆಂದು ಸರಕಾರದ ಕಡೆಯ ಅಭಿಪ್ರಾಯವಿದೆ. ಈ ಅಭಿಪ್ರಾಯ ಮಾತ್ರ ತಪ್ಪು. ಏಕೆಂದರೆ ನ್ಯಾಯಾಧೀಶರು, ತಮ್ಮ ಮುಂದೆ ಮಂಡಿಸಲ್ಪಟ್ಟ ಅಪರಾಧವನ್ನು ವಿಚಾರಿಸಿ, ದೊರೆತ ಪುರಾವೆಗಳನ್ನನುಸರಿಸಿಯೇ ತೀರ್ಪುಕೊಡುತ್ತಾರೆ; ಮೊಕದ್ದಮೆಯನ್ನು ಮಂಡಿಸಿದವರು- ಯೋಗ್ಯರೀತಿಯಲ್ಲಿ ಅದನ್ನು ನಿರ್ವಹಿಸಿದರೆ, ತಕ್ಕ ಶಿಕ್ಷೆಯು ಕೊಡಲ್ಪಡುವುದರಲ್ಲಿ ಅನುಮಾನವಿಲ್ಲ.

ಕಲಬೆರಕೆಯ ದುಶ್ಚಟವು ಯಾವುದಾದರೂ ಒಂದು ರಾಜ್ಯಕ್ಕೆ ಸಂಬಂಧಿಸಿದ್ದಲ್ಲ; ಎಲ್ಲ ಕಡೆಗಳಲ್ಲೂ ಇದೆ. ನಗರಗಳಲ್ಲಿ ಮಾತ್ರವಲ್ಲ- ಹಳ್ಳಿಗಳಲ್ಲೂ ಪ್ರವೇಶಿಸಿದೆ. ಈ ಅಪರಾಧಗಳನ್ನು ಪತ್ತೆಹಚ್ಚುವ ಹೊಣೆಗಾರಿಕೆ ಸರಕಾರದ್ದು ಮಾತ್ರವಲ್ಲ— ಜನತೆಯೂ ಸಹಕರಿಸಬೇಕಾಗಿದೆ. ——

## ಪ್ರೊ| ರಂಗಾರವರ ವಿಜಯ

ತಿರುಚಂಗೋಡು ಮತದಾರ ಕ್ಷೇತ್ರದಲ್ಲಿ ಲೋಕಸಭಾ ಸ್ಥಾನವನ್ನು, ಕಳೆದ ಎರಡು ಮಹಾಚುನಾವಣೆಗಳಲ್ಲೂ ಪಡೆದಿದ್ದ ಕಾಂಗ್ರೆಸ್ಸು, ಈ ಬಾರಿ, ಆ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ, ದ್ರಾವಿಡಮುನ್ನೇತ್ರ ಕಳ್ಗಮ್ಮಿನ ಹುರಿಯಾಳುವನ್ನೆದುರಿಸಿ ಕಳೆದುಕೊಂಡಿತು. ಈ ಆಘಾತದ ಹಿಂದೆಯೇ, ಚಿತ್ತೂರು ಮತದಾರ ಕ್ಷೇತ್ರದಿಂದ ಲೋಕಸಭೆಗೆ ನಡೆದ ಉಪಚುನಾವಣೆಯಲ್ಲಿಯೂ, ಸ್ವತಂತ್ರ ಪಕ್ಷದ ಉಮೇದ್ವಾರ ಪ್ರೊ| ಎನ್. ಜಿ. ರಂಗಾರವರು ಗೆದ್ದು, ಕಾಂಗ್ರೆಸ್ಸು ಇನ್ನೂ ದೊಡ್ಡ ಆಘಾತವನ್ನು ಪಡೆದಿದೆ. ಈ ತ್ರಿಭಾಷಾ ಮತದಾರ ಕ್ಷೇತ್ರದಲ್ಲಿ ಮೂರು ರಾಜ್ಯಗಳ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಉಮೇದ್ವಾರರಿಗೆ ಸಹಾಯಕರಾಗಿದ್ದರು. ಇದಲ್ಲದೆ, ಈ ನೇರ ಹೋರಾಟದಲ್ಲಿ, ಕಮ್ಯೂನಿಸ್ಟರೂ ಕಾಂಗ್ರೆಸ್ ಹುರಿಯಾಳಿಗೆ ಬೆಂಬಲವಿತ್ತಿದ್ದರು. ಹೀಗಿದ್ದೂ, ಸ್ವತಂತ್ರ ಪಕ್ಷದ ಪ್ರೊ| ರಂಗಾರವರು, ತಮ್ಮ ಎದುರಾಳಿ ಶ್ರೀ| ಟಿ. ಎನ್. ವಿಶ್ವನಾಥ ರೆಡ್ಡಿಯವರನ್ನು 1550 ಅಧಿಕ ಬಹುಮತಗಳಿಂದ ಸೋಲಿಸಿದರು. ಈ ಸೋಲಿಗೆ, ಆಂಧ್ರದಲ್ಲಿನ ವಿವಾದಾತ್ಮಕವೆನಿಸಿದ ಅಧಿಕ ಭೂಕಂದಾಯದ ಶಾಸನವೂ ಕಾರಣವೆಂದು ಕಾಂಗ್ರೆಸ್ ವಲಯಗಳ ಅಭಿಪ್ರಾಯವಾಗಿದ್ದರೆ, "ಕಮ್ಯೂನಿಸ್ಟರು ಬೆಂಬಲಿಸಿಯೂ ಕಾಂಗ್ರೆಸ್ಸು ಸೋತುದು ಜನತೆಯ ಅಭಿಪ್ರಾಯದ ಸ್ಪಷ್ಟಪುರಾವೆ" ಎಂದು ಸ್ವತಂತ್ರ ಪಕ್ಷವೆನ್ನುತ್ತಿದೆ. ಇದು ಹೇಗೂ ಇರಲಿ,— ಕಾಂಗ್ರೆಸ್ಸು ಎಲ್ಲ ಕಡೆಗಳಲ್ಲಿ ಮತದಾರರ ಮೇಲೆ ಏಕರೀತಿಯ ಹಿಡಿತವಿರಿಸಿಕೊಳ್ಳಲು ಸಾಧ್ಯವಿಲ್ಲ. ಎಲ್ಲ ಕಾಲವೂ ಎಲ್ಲ ಕಡೆಗಳಲ್ಲೂ ಸುಗಮವಾಗಿಲ್ಲ. ಮೇಲಿನ ಎರಡು ಸೋಲುಗಳೂ ಕಾಂಗ್ರೆಸ್ಸಿಗೆ ಕಣ್ತೆರೆಯಿಸುವಂತಿವೆ. ಎಲ್ಲ ಶಾಸನಗಳೂ, ಎಲ್ಲ ಸುಧಾರಣೆಗಳೂ ಜನತೆಯ ಬಹುಮತಹೊಂದಲಾರವು.

——

### ಗುಜರಾತ್ ರಾಜ್ಯದಲ್ಲಿ ಯುರೆನಿಯಂ ಅದಿರಿನ ನಿಕ್ಷೇಪಗಳು

ಗುಜರಾತ್ ರಾಜ್ಯದ ಸೌರಾಷ್ಟ್ರ ಮತ್ತು ಕಚ್ ಪ್ರದೇಶಗಳಲ್ಲಿ ಇದುವರೆಗೆ ನಡೆಸಿದ ರೇಡಿಯೋ ಮೆಟ್ರಿಕ್ ಸರ್ವೆಗಳಿಂದ ಆ ಪ್ರದೇಶಗಳಲ್ಲಿ ಯುರೆನಿಯಂ ಅದಿರಿನ ಸಂಗ್ರಹವಿರುವುದಾಗಿ ಕಂಡುಬಂದಿದೆ.

ಈ ಯುರೆನಿಯಂ ಅದಿರಿನ ಸಂಗ್ರಹವನ್ನು ಆರ್ಥಿಕ ಉದ್ದೇಶಗಳಿಗಾಗಿ ಬಳಸಲು ಸಾಧ್ಯವಿರುವುದಾಗಿ ಕಂಡುಬಂದಿದೆ.

——

### ಕಡಿಮೆ ವರಮಾನ ವರ್ಗದವರಿಗೆ ವಸತಿ ನಿರ್ಮಾಣ ಕಾರ್ಯಯೋಜನೆಯ ಪ್ರಗತಿ

ಕೇಂದ್ರ ಸರ್ಕಾರವು ಕಡಿಮೆ ವರಮಾನ ವರ್ಗದ ವಸತಿ ನಿರ್ಮಾಣ ಕಾರ್ಯಯೋಜನೆಯ ಮೇರೆಗೆ ರಾಜ್ಯ ಸರ್ಕಾರಗಳಿಗೆ ಇದುವರೆಗೆ 25·75 ಕೋಟಿ ರೂ. ಮಂಜೂರಾತಿ ಮಾಡಿದ್ದು ಅದರಲ್ಲಿ ಈಗಾಗಲೇ 22·65 ಕೋಟಿ ರೂ.ಗಳನ್ನು ಹಂಚಲಾಗಿದೆ ಎಂದು ಕೇಂದ್ರ ಸರ್ಕಾರದ ಕಾಮಗಾರಿ ವಸತಿ ಮತ್ತು ಪೂರೈಕೆ ಮಂತ್ರಿ ಶ್ರೀ| ಮೆಹರ್ ಚಂದ್ ಖನ್ನಾ ಅವರು ಈಚೆಗೆ ರಾಜ್ಯ ಸಭೆಗೆ ತಿಳಿಸಿದ್ದಾರೆ.

ಈ ಕಾರ್ಯಯೋಜನೆಯ ಮೇರೆಗೆ, ರಾಜ್ಯಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು 46,941 ಮನೆಗಳ ನಿರ್ಮಾಣಕ್ಕೆ ಅನುಮತಿ ನೀಡಿದ್ದು ಅವುಗಳಲ್ಲಿ 39,350 ಮನೆಗಳು ಈಗಾಗಲೇ ಪೂರ್ಣಗೊಂಡಿವೆ. ಮೈಸೂರು ರಾಜ್ಯದಲ್ಲಿ ಕಡಿಮೆ ವರಮಾನ ಗುಂಪಿನ ವಸತಿ ನಿರ್ಮಾಣ ಕಾರ್ಯಯೋಜನೆಯ ಮೇರೆಗೆ 30,70 ಮನೆಗಳನ್ನು ಕಟ್ಟಲಾಗಿದೆ.

——

### ಕಬ್ಬಿಣದ ಅದಿರಿನ ಉತ್ಪಾದನೆ

1961—62ರಲ್ಲಿ ಭಾರತದಲ್ಲಿ (ಗೋವಾವನ್ನುಳಿದು) ಕಬ್ಬಿಣದ ಅದಿರು ಉತ್ಪಾದನೆಯು 13 ದಶಲಕ್ಷ ಟನ್ನುಗಳಿಗಿಂತ ಕೊಂಚ ಕಡಿಮೆ ಇದ್ದಿತು. ತೃತೀಯ ಯೋಜನೆಯ ಅಂತ್ಯದ ವೇಳೆಗೆ 32 ದಶಲಕ್ಷ ಟನ್ನುಗಳಷ್ಟು ಕಬ್ಬಿಣದಅದಿರನ್ನು ಉತ್ಪಾದಿಸಲು ಗುರಿಯನ್ನಿಟ್ಟುಕೊಳ್ಳಲಾಗಿದೆ. 1959-60ನೇ ವರ್ಷಕ್ಕಿಂತ ಈ ವರ್ಷದಲ್ಲಿ ಕಬ್ಬಿಣದ ಅದಿರಿನ ಉತ್ಪಾದನೆಯು 40 ದಶಲಕ್ಷದಷ್ಟು ಹೆಚ್ಚಿದೆ ಎಂದು ಕೇಂದ್ರ ಗಣಿ ಮತ್ತು ಇಂಧನ ಉಪಮಂತ್ರಿ ಶ್ರೀ| ಆರ್. ಎಂ. ಹಜರ್ನವೀಸ್‌ರವರು ಈಚೆಗೆ ಲೋಕಸಭೆಗೆ ತಿಳಿಸಿದರು.

——

### ಉತ್ತರ ಕನ್ನಡ ಜಿಲ್ಲೆಯಲ್ಲಿ ವಿಚಿತ್ರ ಖಾಯಿಲೆ

ಮೈಸೂರು ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಮ್ಯಾಂಗನೀಸ್ ವಿಷ ಸೇವನೆಯಿಂದಾಗಿ ತಲೆದೋರುತ್ತಿರುವ ಖಾಯಿಲೆಯನ್ನು ಕುರಿತು ಸಂಶೋಧನೆ ನಡೆಸಲು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಸಂಶೋಧನಾ ತಂಡವೊಂದನ್ನು ನೇಮಿಸಿದೆಯೆಂದು ಕೇಂದ್ರ ಆರೋಗ್ಯ ಮಂತ್ರಿ ಡಾ| ಸುಶೀಲಾ ನಯ್ಯಾರ್‌ರವರು ಈಚೆಗೆ ಲೋಕಸಭೆಗೆ ತಿಳಿಸಿದ್ದಾರೆ.

ಮ್ಯಾಂಗನೀಸ್ ವಿಷ ಸೇವನೆಯಿಂದುಂಟಾಗುತ್ತಿರುವ ಖಾಯಿಲೆಯು ಕೈಗಾರಿಕಾ ಆತಂಕವಾಗಿದೆ. ಈ ಖಾಯಿಲೆಯ ಕ್ರೂರ ಪರಿಣಾಮಗಳೇನೆಂಬುದು ಇನ್ನೂ ತಿಳಿದಿಲ್ಲ. ಈ ಖಾಯಿಲೆ ಉಂಟಾದಲ್ಲಿ ರೋಗಿಯನ್ನು ಗಣಿ ಕೆಲಸದಿಂದ ಬೇರ್ಪಡಿಸಿ, ಬೇರೆ ಉದ್ಯೋಗಗಳಲ್ಲಿ ತೊಡಗಿಸುವುದರ ಹೊರತು ಈ ಖಾಯಿಲೆಯನ್ನು ತಡೆಗಟ್ಟಲು ಮತ್ತಾವುದೇ ನಿರ್ದಿಷ್ಟ ಮಾರ್ಗವನ್ನು ಈ ವರೆಗೆ ಕಂಡುಹಿಡಿಯಲಾಗಿಲ್ಲ.

ಉತ್ತರ ಕನ್ನಡ ಜಿಲ್ಲೆಯ ಒಂದು ಭಾಗದಲ್ಲಿ ಮ್ಯಾಂಗನೀಸ್ ಧೂಳಿನ ವಿಷ ಸೇವನೆಯಿಂದಾಗಿ ವಿಚಿತ್ರ ಖಾಯಿಲೆಯೊಂದು ಹರಡುತ್ತಿದೆಯೆಂಬ ಪತ್ರಿಕಾ ವರದಿಯ ಆಧಾರದ ಮೇಲೆ, ಲೋಕಸಭೆಯಲ್ಲಿ ಈ ಪ್ರಶ್ನೆಯನ್ನು ಕೇಳಲಾಗಿತ್ತು.

——

### ಗುರುಪುರ ಬಳಿ ಬಸ್ಸು ಅವಘಡ

ಮಂಗಳೂರಿಂದ ಸುಮಾರು 10 ಮೈಲು ದೂರ ಗುರುಪುರದ ಬಳಿ ಪ್ರಯಾಣಿಕರ ಬಸ್ಸೊಂದು ತಾ. 28ರಂದು ಮಧ್ಯಾಹ್ನ ಅಪಘಾತಕ್ಕೀಡಾಗಿ ರಸ್ತೆಯ ಎಡ ಬದಿಯ ಹೊಂಡಕ್ಕೆ ಮಗುಚಿಬಿದ್ದುದರಿಂದ ಓರ್ವನು ಕೊಲ್ಲಲ್ಪಟ್ಟು ಇತರ 20 ಮಂದಿ ಗಾಯಗೊಂಡ ಅವಘಡ ವರದಿಯಾಗಿದೆ. ಬಸ್ಸು ಗುರುಪುರ ಬಳಿಯ ಇಳಿಜಾರಿನ ಮಾರ್ಗವೊಂದರಲ್ಲಿ ತಿರುಗುತ್ತಿದ್ದಾಗ ಬ್ರೇಕ್ ಫೈಲ್ ಆಗಿ ಈ ದುರಂತ ಸಂಭವಿಸಿತೆನ್ನಲಾಗಿದೆ. ಗಾಯಗೊಂಡವರನ್ನೆಲ್ಲಾ ಮಂಗಳೂರು ಸರಕಾರೀ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಮಂಗಳೂರು ರೂರಲ್ ಸರ್ಕಲ್ ಇನ್ಸಪೆಕ್ಟರ್ ಶ್ರೀ| ಬಟ್ಯಪ್ಪನವರು ಸ್ಥಳಕ್ಕೆ ಧಾವಿಸಿ, ಬಜ್ಪೆ ಪೋಲೀಸ್ ಸಬ್ ಇನ್ಸಪೆಕ್ಟರ್ ಶ್ರೀ| ರಾಮಚಂದ್ರನವರ ಸಹಾಯದಿಂದ ತನಿಖೆ ನಡೆಸಿರುವರು.

——

# ಭಾರತೀಯ ಹಡಗು ಸಾರಿಗೆ ಅಭಿವೃದ್ಧಿ

ಕಡಲ ತೀರವುಳ್ಳ ರಾಷ್ಟ್ರದಲ್ಲಿ ಹಡಗು ಸಾರಿಗೆಯು ರಾಷ್ಟ್ರೀಯ ಸೊತ್ತು. ದೇಶದ ವಾಣಿಜ್ಯಾಭಿವೃದ್ಧಿಗೆ ಅತ್ಯಂತ ಅಗತ್ಯವಿರುವ ಆರ್ಥಿಕ ನೀತಿಯನ್ನು ನಿರ್ಧರಿಸುವಲ್ಲಿಯೂ ಅದರ ಮಹತ್ವ ಅಷ್ಟಿಷ್ಟಲ್ಲ. ದೇಶದ ರಕ್ಷಣಾವ್ಯವಸ್ಥೆಯಲ್ಲಿ ನೌಕಾಸೇನೆ ದ್ವಿತೀಯ ಸ್ಥಾನ ಪಡೆದಿದೆ.

ಭಾರತಕ್ಕೆ ಹಡಗು ಸಾರಿಗೆಯಲ್ಲಿ ಹಿರಿದಾದ ಪರಂಪರೆಯಿದೆ. ಹಿಂದೂ ಮಹಾಸಾಗರವು ದಕ್ಷಿಣ ಮತ್ತು ಆಗ್ನೇಯ ಏಷ್ಯಾದಲ್ಲಿಯೇ ಆಯಕಟ್ಟಿನ ಪ್ರದೇಶವಾಗಿದೆ. ಪ್ರಾಚೀನಕಾಲದಲ್ಲಿ ಭಾರತದ ಹಡಗು ಸಾರಿಗೆ ಮತ್ತು ಹಡಗು ನಿರ್ಮಾಣ ಕಾರ್ಯವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ದೇಶದ ಹಡಗುಗಳು ಭೋರ್ಗರೆಯುವ ಕಡಲನ್ನು ಸೀಳಿ ದೂರ ದೂರದ ದ್ವೀಪಗಳಿಗೆ ವಾಣಿಜ್ಯ ವಸ್ತುಗಳನ್ನು ಸಾಗಿಸುತ್ತಿದ್ದವೆಂಬುದಕ್ಕೆ ಭಾರತದ ಇತಿಹಾಸದಲ್ಲಿ ಅತ್ಯುತ್ತಮ ನಿದರ್ಶನಗಳಿವೆ.

ಬ್ರಿಟಿಷರ ಆಗಮನದೊಂದಿಗೆ ರಾಷ್ಟ್ರದ ಹಡಗು ಸಾರಿಗೆಯ ವ್ಯವಸ್ಥೆಗೆ ಧಕ್ಕೆ ತಗುಲಿತು. ತೀರ ಇತ್ತೀಚೆಗೆ ಅಂದರೆ 20ನೇ ಶತಮಾನದ ಆದಿಭಾಗದಲ್ಲಿ, ರಾಷ್ಟ್ರೀಯ ಹಡಗು ಪಡೆ ನಿರ್ಮಾಣಕ್ಕಾಗಿ ಪುನಃ ಹೊಸದಾಗಿ ಪ್ರಯತ್ನಿಸಲಾಯಿತು.

## ಹಡಗು ಸಾರಿಗೆಯ ಇತಿಹಾಸ

ಭಾರತದ ಹಡಗು ಸಾರಿಗೆಯ ಇತಿಹಾಸದಲ್ಲಿ ಇತ್ತೀಚಿನ ಅಧ್ಯಾಯವು 1919ರಿಂದ ಆರಂಭವಾಯಿತೆಂದು ಹೇಳಬಹುದು ಆಗ ಸಿಂಧಿಯಾ ಆದಿಯ ಹಡಗು ಸಾರಿಗೆ ಕೊರ್ಪೊರೇಷನ್‌ಗೆ ಕರಾವಳಿ ವ್ಯಾಪಾರದಲ್ಲಿ ಖಾಯಂ ಪಾಲು ನೀಡಲಾಯಿತು. ಭಾರತದ ಹಡಗು ಸಾರಿಗೆ ಅಷ್ಟು ಸಂಘಟಿತವಾಗಿರಲಿಲ್ಲ. ಇಷ್ಟೇ ಅಲ್ಲ. ದ್ವಿತೀಯ ವಿಶ್ವ ಸಮರ ಆರಂಭವಾದ ಸಮಯದಲ್ಲಿ, ಭಾರತೀಯ ಹಡಗುಗಳು ಕೇವಲ 125,000 ಗ್ರಾಸ್ ಟನ್ ಸರಕು ಸಾಗಾಣಿಕೆ ಮಾಡುತ್ತಿದ್ದುವು.

1961ರ ಅಕ್ಟೋಬರ್ ತಿಂಗಳಲ್ಲಿ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಹಡಗು ಸಾರಿಗೆ ಸಂಸ್ಥೆಗಳು ಪರಸ್ಪರ ವಿಲಯನ ಹೊಂದಿದ ಫಲಸ್ವರೂಪವಾಗಿ, ಭಾರತದ ಹಡಗು ಸಾರಿಗೆ ಕೊರ್ಪೊರೇಶನ್ ಎಂಬ ಹೊಸದೊಂದು ಸಂಸ್ಥೆ ಮೈವೆತ್ತಿ ಬಂದಿತು. ಈಗ ಕೊರ್ಪೊರೇಶನ್ನಿನ ನಿಯಂತ್ರಣದಲ್ಲಿ 21 ಹಡಗುಗಳಿದ್ದು ಹಡಗುಗಳು ಕರಾವಳಿ ಮತ್ತು ಆಸ್ಟ್ರೇಲಿಯಾ, ಜಪಾನ್, ಮಲಯಾ, ಪೂರ್ವ ಆಫ್ರಿಕಾ, ಪೋಲೆಂಡ್, ಕಪ್ಪುಸಮುದ್ರ, ಬ್ರಿಟನ್ ಮೊದಲಾದ ಸಾಗರದಾಚೆಯ ಪ್ರದೇಶಗಳೊಂದಿಗೆ ವ್ಯಾಪಾರ ನಿರ್ವಹಿಸುತ್ತವೆ. ಇದಲ್ಲದೆ ಕೊರ್ಪೊರೇಷನ್‌ಗಾಗಿ ಹಿಂದೂಸ್ಥಾನ್ ಹಡಗು ನಿರ್ಮಾಣ ಕಾರ್ಖಾನೆಯಲ್ಲಿ 9200 ಗ್ರಾಸ್ ಟನ್ ಭಾರದ ನಾಲ್ಕು ಹಡಗುಗಳನ್ನು ನಿರ್ಮಿಸಲಾಗುತ್ತಿದೆ. 1965–66ರ ವೇಳೆಗೆ ಮತ್ತೆ ಆರು ಹಡಗುಗಳ ನಿರ್ಮಾಣದ ಗುರಿಯನ್ನೂ ಇಟ್ಟುಕೊಳ್ಳಲಾಗಿದೆ.

## ಹಡಗು ನಿರ್ಮಾಣ ಕಾರ್ಯದಲ್ಲಿ ಪ್ರಗತಿ

ಸರಕಾರಿ ಕ್ಷೇತ್ರದಲ್ಲಿರುವ ವಿಶಾಖಪಟ್ಟಣದ ಹಡಗು ನಿರ್ಮಾಣ ಕಾರ್ಖಾನೆಯು 1952ರಲ್ಲಿ ಕ್ರಮೇಣ ವಿಸ್ತರಣೆಗೊಂಡಿತು. 1962ರ ಮಾರ್ಚಿ ತಿಂಗಳವರೆಗೆ, ಕಾರ್ಖಾನೆಯು ಸಾಗರ ಪಯಣಕ್ಕೆ ಅರ್ಹವಾದ 27 ಹಡಗುಗಳನ್ನು ನಿರ್ಮಿಸಿದೆ. ಇದಲ್ಲದೆ, ಮೂರು ಸಣ್ಣ ಸಣ್ಣ ದೋಣಿಗಳು, ನೌಕಾಪಡೆಗೆ ಅಗತ್ಯವಿದ್ದ ಸಹಾಯಕ ದೋಣಿಗಳು ಇವುಗಳನ್ನು ನಿರ್ಮಿಸಿತು. ಇವುಗಳ ಒಟ್ಟು ಪ್ರಮಾಣ ಸುಮಾರು 445,304 ಗ್ರಾಸ್ ಟನ್‌ಗಳು.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಿಶಾಖಪಟ್ಟಣದ ಹಡಗು ನಿರ್ಮಾಣ ಕಾರ್ಖಾನೆಯು 11 ಸರಕು ಹಡಗುಗಳನ್ನೂ ಮೂರು ಚಿಕ್ಕ ನೌಕೆಗಳನ್ನೂ ತಯಾರಿಸಿತು.

## ತೃತೀಯ ಯೋಜನೆಯಲ್ಲಿ

ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಹಡಗು ಸಾರಿಗೆಯ ಅಭಿವೃದ್ಧಿಗಾಗಿ 55 ಕೋಟಿ ರೂ.ಗಳನ್ನು ತೆಗೆದಿರಿಸಲಾಗಿದೆ. ಹಡಗು ಸಾರಿಗೆ ಅಭಿವೃದ್ಧಿ ನಿಧಿಯಿಂದ ದೊರೆಯುವ 4 ಕೋಟಿ ರೂ.ಗಳು ಹಾಗೂ ಖಾಸಗಿ ಹಡಗು ಸಾರಿಗೆ ಸಂಸ್ಥೆಗಳಿಂದ 7 ಕೋಟಿ ರೂ.ಗಳನ್ನೊಳಗೊಂಡು ಹಡಗು ಸಾರಿಗೆಯ ಅಭಿವೃದ್ಧಿಗಾಗಿ 66 ಕೋಟಿ ರೂ. ದೊರೆಯುವವು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಚ್ಚಿಯಲ್ಲಿ ಭಾರತದ ದ್ವಿತೀಯ ಹಡಗು ನಿರ್ಮಾಣ ಕಾರ್ಖಾನೆಯನ್ನು ಸ್ಥಾಪಿಸುವ ಕಾರ್ಯಯೋಜನೆಯೂ ಇದ್ದು, ಇದಕ್ಕಾಗಿ 20 ಕೋಟಿ ರೂ.ಗಳ ವ್ಯವಸ್ಥೆ ಮಾಡಲಾಗಿದೆ.

---

## ಜಿಲ್ಲಾ ಸುದ್ದಿ ಸಾರ

ಮಂಗಳೂರು ಸೈಂಟ್ ಎಲೋಸಿಯಸ್ ಕೊಲೇಜಿನ ರಕ್ಷಕ-ಶಿಕ್ಷಕ ಸಂಘದ ಸಭೆಯು, ತಾ. 29ರಂದು, ಕೆನರಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ| ಕೆ. ಶ್ರೀನಿವಾಸ ಕಿಣಿ, ಬಿ. ಎ., ಎಲ್. ಟಿ., ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಮಂಗಳೂರು ವಕೀಲರ ಗುಮಾಸ್ತರ ಸಂಘದ ಮಹಾಸಭೆಯು ತಾ. 28ರಂದು ಶ್ರೀ| ಬಿ ನಾರಾಯಣ ಭಟ್ಟರವರ ಅಧ್ಯಕ್ಷತೆಯಲ್ಲಿ ಜರಗಿದಾಗ, ಶ್ರೀ| ಎಸ್. ವಿಠ್ಠಲ ಕಾಮತರವರು ಅಧ್ಯಕ್ಷರಾಗಿಯೂ, ಶ್ರೀ| ಬಿ ನಾರಾಯಣ ಭಟ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ| ಬಿ. ನಾರಾಯಣ ರಾವ್‌ರವರು ಕಾರ್ಯದರ್ಶಿಯಾಗಿಯೂ, ಶ್ರೀ| ಕೆ. ರಾಮಚಂದ್ರನವರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

ಬ್ರಹ್ಮಶ್ರೀ ನಾರಾಯಣ ಗುರುಗಳ 108ನೇ ಜನ್ಮದಿನೋತ್ಸವವು ಇದೇ ತಾ. 13ನೇ ಗುರುವಾರ ಬಿಲ್ಲವ ಯುವಕ ಸಂಘ, ಉರ್ವ, ಇದರ ಆಫೀಸಿನಲ್ಲಿ ಜರಗುವುದು. ಅಂದು ಪ್ರಾತಃಕಾಲ ಭಜನಾಸಮಾರಂಭವೂ, ಮಧ್ಯಾಹ್ನ 12ರಿಂದ ಸಾಯಂಕಾಲ 6ರ ವರೆಗೆ ಗುರುಪೂಜೆಯೂ, ಅನಂತರ ಕುದ್ರೋಳಿಯಲ್ಲಿರುವ ಶ್ರೀ ಗೋಕರ್ಣನಾಥ ದೇವಸಾನಕ್ಕೆ ಮೆರವಣಿಗೆಯೂ ಇದೆ.

ಕುಳಾಯಿ ಗ್ರಾಮ ಸಂಘದ ಸಮಾಜ ಮಂದಿರದಲ್ಲಿ ತಾ. 22ರಂದು ರಾತ್ರೆ, ಶ್ರೀ ಕೃಷ್ಣ ಜನ್ಮಾಷ್ಟಮಿಯ ನಿಮಿತ್ತ ಭಜನಾ ಕಾರ್ಯಕ್ರಮವೂ ಮರುದಿನ ಅಪರಾಹ್ನ 3ರಿಂದ ಸಾಯಂಕಾಲ 7ರ ವರೆಗೆ ಆಕರ್ಷಕ ಆಟ-ಪಂದ್ಯಾಟಗಳೂ ಜರಗಿದುವು.

ಮಂಗಳೂರು ಗವರ್ನಮೆಂಟ್ ಕೊಲೇಜಿನ ಕನ್ನಡ ಮಹಾಸಭೆಯ ಉದ್ಘಾಟನೆಯು, ತಾ. 24ರಂದು, ಉಡುಪಿಯ ಮಹಾತ್ಮಾ ಗಾಂಧಿ ಮೆಮೊರಿಯಲ್ ಕೊಲೇಜಿನ ವೈಸ್ ಪ್ರಿನ್ಸಿಪಾಲ ಶ್ರೀ| ಕು. ಶಿ. ಹರಿದಾಸ ಭಟ್ಟರಿಂದ ನೆರವೇರಿತು.

ಮಂಗಳೂರು ಸಿಟಿ ಯುವಕ ಕೊಂಗ್ರೆಸಿನ ಸಾಪ್ತಾಹಿಕ ಸಭೆಯು ಸರ್ವೋದಯ ಕಾರ್ಯಕರ್ತ ಶ್ರೀ| ಎಸ್. ಯು. ರಾಮಚಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ಕಳೆದ ರವಿವಾರ ಜರಗಿತು.

---

## ಶ್ರೀ| ಸೇವ ನಮಿರಾಜ ಮಲ್ಲರವರಿಗೆ ಔತಣ ಸತ್ಕಾರ

ಮಂಗಳೂರಲ್ಲಿ ಹಲವು ವರ್ಷಗಳಿಂದ, ಕಾದಂಬರಿಕಾರರಾಗಿ, ಪತ್ರಿಕೋದ್ಯಮಿಯಾಗಿ, ಎಡ್ವೊಕೇಟರಾಗಿ ಜಿಲ್ಲೆಯ ಜನರಿಗೆ ಸುಪರಿಚಿತರಾಗಿರುವ ಶ್ರೀ| ಸೇವ ನಮಿರಾಜ ಮಲ್ಲ, ಬಿ. ಎ., ಬಿ. ಎಲ್., ಇವರಿಗೆ, ಜ್ಯುಡಿಶಿಯಲ್ ಮುನ್ಸೀಫರಾಗಿ ಸವದತ್ತಿಗೆ ನೇಮಕವಾಗಿದ್ದು, ಶ್ರೀ| ಮಲ್ಲರು, ತಾ. 30 ರಂದು, ಚಾರ್ಜು ವಹಿಸಲು, ಮಂಗಳೂರಿನಿಂದ ಸವದತ್ತಿಗೆ ತೆರಳಿದರು.

ಶ್ರೀ| ಮಲ್ಲರನ್ನು ಗೌರವಿಸಲು ಮಂಗಳೂರು ಪತ್ರಿಕೋದ್ಯಮ ಸಂಘದವರು, ವುಡ್‌ಲೇಂಡ್ಸ್ ಹೊಟೇಲಿನಲ್ಲಿ, ತಾ. 29ನೇ ರಾತ್ರಿ 8ಕ್ಕೆ, ಔತಣ ಸತ್ಕಾರವನ್ನೇರ್ಪಡಿಸಿದ್ದರು. ಈ ಸಮಾರಂಭಕ್ಕೆ ಉಡುಪಿಯಿಂದ ಶ್ರೀ| ಕು. ಶಿ ಹರಿದಾಸ ಭಟ್ ಮೊದಲಾದವರು, ಮಂಗಳೂರಿನ ಹಲವು ಪತ್ರಿಕೋದ್ಯಮಿಗಳೂ ಆಗಮಿಸಿದ್ದರು. ಶ್ರೀ| ಕೆ. ಆರ್. ಆಚಾರ್, ಎಮ್. ಎಲ್. ಸಿ., ಶ್ರೀ| ಕು. ಶಿ. ಹರಿದಾಸ ಭಟ್ ಮೊದಲಾದವರು ಶ್ರೀ| ಮಲ್ಲರನ್ನು ಪ್ರಶಂಸಿಸಿ, ಪತ್ರಿಕೋದ್ಯಮದಿಂದ ನ್ಯಾಯಾಂಗಕ್ಕೆ ತೆರಳಲಿರುವ ಅವರಿಗೆ ಯಶಸ್ಸನ್ನು ಕೋರಿದರು. ಶ್ರೀ| ಮಲ್ಲರವರು, ತಮ್ಮನ್ನು ಸತ್ಕರಿಸಿದುದಕ್ಕಾಗಿ ಕೃತಜ್ಞತೆ ತಿಳಿಸಿದರು. (ಶ್ರೀ| ಕೆ. ಶ್ರೀನಿವಾಸ ಉಪಾಧ್ಯಾಯರು ಆರಂಭದಲ್ಲಿ ಸ್ವಾಗತ ಭಾಷಣಮಾಡಿ, ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು.)

---

## ನಿಧನ

ಶ್ರೀ| ಕಾಪು ವಾಮನ ಕಾಮತ್‌ರವರು, ಬಾವಟೆಗುಡ್ಡೆಯಲ್ಲಿರುವ ತಮ್ಮ ತೃತೀಯ ಪುತ್ರ ಶ್ರೀ| ಕೆ. ಮಾಧವ ಕಾಮತ್‌ರವರ ಮನೆಯಲ್ಲಿ ಇದೇ ತಾ. 29—8—62ನೇ ಬುಧವಾರ ನಿಧನ ಹೊಂದಿದರು. ಮೃತರಿಗೆ ವಯಸ್ಸು ಸುಮಾರು 85. ——



# "ವೀರ ಹನುಮಾನ್"

(ಲೇ. - ಎಂ. ಎಸ್. ಆಚಾರ್, ಸುರತ್ಕಲ್ಲು.)

"ಹನುಮಂತನ ಮತವೇ ಹರಿಯ ಮತವು
ಹರಿಯಾ ಮತವೇ ಹನುಮನ ಮತವು'

ದಕ್ಷಿಣ ಭಾರತದ ಸುಮೇರು ಪರ್ವತದ ಅಕ್ಕಪಕ್ಕದಲ್ಲಿ ವಾನರವಂಶೀಯ ಕ್ಷತ್ರಿಯರ ರಾಷ್ಟ್ರವಿತ್ತು. ಈ ರಾಜ್ಯದಲ್ಲಿ ಕೇಶರೀ ಎಂಬ ಮಹಾಪರಾಕ್ರಮಿ ಪುರುಷನಿದ್ದನು. ಅಂಜನಾದೇವಿಯು ಈತನ ಧರ್ಮಪತ್ನಿಯು. ಈ ದಂಪತಿಗಳು ಸದ್ಧರ್ಮ ನಿರತರಾಗಿದ್ದರು. ಆದರೆ ಬಹು ಕಾಲದ ತನಕ ಸಂತಾನಲಭ್ಯವಾಗದ ಚಿಂತೆಯು ಇವರನ್ನು ನಿತ್ಯವೂ ಕಾಡುತಿತ್ತು.

ಒಮ್ಮೆ ಧರ್ಮ ಪ್ರಚಾರಕರಾದ ದೇವಲೋಕದ ನಾರದ ಮಹರ್ಷಿಗಳು ಇವರ ಕುಟೀರಕ್ಕೆ ಆಗಮಿಸಿದರು. ಸತಿಪತಿಗಳು ಯೋಗ್ಯರೀತಿಯಿಂದ ಮಹರ್ಷಿಗಳನ್ನು ಗೌರವಿಸಿ ಸತ್ಕರಿಸಿದರು. ನಾರದ ಮಹರ್ಷಿಗಳು ಆ ದಂಪತಿಗಳ ಆತಿಥ್ಯದಿಂದ ಸಂತುಷ್ಟರಾಗಿ ಅವರ ಯೋಗಕ್ಷೇಮವನ್ನು ವಿಚಾರಿಸಿದರು. ಆಗ ಸತಿಪತಿಗಳು ಕೈಜೋಡಿಸಿ 'ಮಹರ್ಷಿಗಳೇ, ತಮ್ಮ ಆಗಮನದಿಂದ ನಮ್ಮ ಕುಟೀರವು ಪಾವನವಾಯಿತು. ಸಕಲ ಪಾಪಗಳು ದೂರವಾದುವು. ನಾವಾದರೂ ಇಂದಿಗೆ ಮಹಾಭಾಗ್ಯಶಾಲಿಗಳಾದೆವು. ಆದರೆ, ಮಕ್ಕಳ ಆಟಪಾಟಗಳನ್ನು ಕಾಣದ ಈ ಕುಟೀರವು, ನಿತ್ಯದುಃಖಕ್ಕೆ ಒಳಗಾಗಿದೆ. "ಮಕ್ಕಳನ್ನು ಪಡೆಯದವರಿಗೆ, ಸದ್ಗತಿ ದೊರೆಯದು," ಎಂಬ ವಚನವಿದೆ. ಅದ್ದರಿಂದ ಸತ್ಪುತ್ರನನ್ನು ಹೊಂದುವ ಸುಲಭ ಮಾರ್ಗವನ್ನು ಅನುಗ್ರಹಿಸಬೇಕು" ಎಂದು ತಮ್ಮ ಅಂತರದ ಚಿಂತೆಯನ್ನು ಮನಬಿಚ್ಚಿ ನುಡಿದರು. ಅದನ್ನು ಕೇಳಿದ ಮಹರ್ಷಿಗಳು "ಅಯ್ಯಾ ಬಂಧುವೇ, ಪರಮಾತ್ಮನು ದಯಾಳುವಾಗಿರುವನ್ನು ಸಕಲ ದೇವತೆಯರು ಆತನ ಆಜ್ಞೆಯಿಂದಲೇ ನಡೆಯುತಕ್ಕವರಿರುವರು. ಅದ್ದರಿಂದ ಆ ದೇವತೆಗಳ ದೇವನನ್ನು ಶ್ರದ್ಧಾತ್ಮರಾಗಿ ನೀವು ಭಕ್ತಿಮಾಡಿರಿ. ಆತನು ಅವಶ್ಯವಾಗಿ ದುಃಖಿಗಳ ದುಃಖವನ್ನು ನಿವಾರಣೆ ಮಾಡಿಯೇ ಮಾಡುವನು. ನಿಮ್ಮ ಇಷ್ಟಾರ್ಥವನ್ನು ಕರುಣಿಸುವನು" ಎಂದು ಆಶೀರ್ವದಿಸಿ, ಅವರನ್ನು ಸಂತೈಸಿದರು. ಸತಿಪತಿಗಳು ಭಗವಂತನನ್ನು ಭಕ್ತಿಯಿಂದಪೂಜಿಸಲು ದೃಢಸಂಕಲ್ಪ ಮಾಡಿದರು. ನಾರದ ಮಹರ್ಷಿಗಳು ಅವರಿಂದ ಬೀಳ್ಕೊಂಡು ದೇವಗಾನವನ್ನು ಮಾಡುತ್ತಾ ಹೋದರು.

ವೀರ ಕೇಶರೀ ಮತ್ತು ಅಂಜನಾದೇವಿಯವರು, ಋಷಿವಾಕ್ಯವನ್ನು ಹೃದಯದಲ್ಲಿ ಧಾರಣಮಾಡಿ ಅಂಜನಾದ್ರಿಯಲ್ಲಿ ಕಠಿಣ, ವ್ರತನಿಯಮಗಳನ್ನು ಆಚರಿಸಿದರು. ಪ್ರತಿದಿನವು ಪರಮಾತ್ಮನ ಭಕ್ತಿಮಾರ್ಗಕ್ಕೆ ಒಳಪಟ್ಟ ಭಜನೆ, ಕೀರ್ತನೆ, ಪೂಜನೆಯಲ್ಲಿ ನಿರತರಾದರು. ಇವರ ಜೀವನವು ಮುನಿಗಳ ತಪಸ್ಸಿನ ಜೀವನಕ್ಕೆ ಸಮವಾಗಿತ್ತು.

ಭಗವಂತನು ಭಕ್ತರ ಅಧೀನನು! ಆತನು ಭಕ್ತ ಸತ್ಸೇವೆಯಿಂದ ಸಂತುಷ್ಟನಾಗುವನು. ಅದರ ಸತ್ಫಲವಾಗಿ, ಭಕ್ತರ ಬೇಡಿಕೆಯನ್ನು ಪೂರೈಸುವನು. ಅಂತೆಯೇ ವೀರಕೇಶರೀ ಮತ್ತು ಅಂಜನಾದೇವಿಯರಲ್ಲಿ ಅವತರಿಸುವಂತೆ ವಾಯುದೇವನಿಗೆ ಆಜ್ಞೆಯಿತ್ತನು. ಅಂಜನೆಯು ಗರ್ಭಚಿಹ್ನೆಗಳನ್ನು ಧರಿಸಿದಳು. ಆಕೆ, ಚೈತ್ರ ಪೂರ್ಣಿಮೆಯ ಮಂಗಳವಾರದ ಸೂರ್ಯೋದಯದ ಶುಭಮುಹೂರ್ತದಲ್ಲಿ ಪುತ್ರರತ್ನವನ್ನು ಪಡೆದಳು. ದೇವತೆಗಳು ಬಂದು ಆ ಕೂಸಿನ ನಾಲಗೆಯಲ್ಲಿ 'ಓಂ'ಕಾರವನ್ನು ಬರೆದರು, ಕಿವಿಯಲ್ಲಿ ಭಗವಂತನ ನಾಮವನ್ನು ಉಚ್ಚರಿಸಿದರು! ಆ ಪುತ್ರೋತ್ಸವದ ಆನಂದದ ಸುದ್ದಿ ನಾಡಿನಲ್ಲೆಲ್ಲಾ ಹಬ್ಬಿತು. ಆ ನಾಡವಾಸಿಗಳೆಲ್ಲಾ ಬಂದು, ಪುತ್ರರತ್ನದ ದಿವ್ಯತೇಜಸ್ಸನ್ನು ಕಂಡು ಹರ್ಷಿತರಾದರು. ಆ ಮಗು ಜನಿಸಿದೊಡನೆ ಸೂರ್ಯನನ್ನು ಫಲವೆಂದು ಪೀಡಿಸಿತು. ಇಂದ್ರನು ಹೊಡೆದುದರಿಂದ 'ಹನುಮಾನ್'' ಎಂಬ ಹೆಸರು ಬಂತು. ಆಗ ಸ್ತಬ್ಧನಾದ ವಾಯುವನ್ನು ಸಂತೈಸಿ, ದೇವತೆಗಳು ಹನುಮನಿಗೆ ಸ್ವೇಚ್ಛಾಮರಣವನ್ನೂ, ವಾಯುವೇಗವನ್ನೂ ಅನುಗ್ರಹಿಸಿದರು.

ಹನುಮಾನನು ತನ್ನ ಬಾಲಲೀಲೆಗಳಿಂದ, ತಂದೆ ತಾಯಿಗಳನ್ನು ಸಂತಸದ ಸುಗ್ಗಿಯಲ್ಲಿ ತೇಲಿಸಿದಳು. ಅಕ್ಕಪಕ್ಕದ ಹೆಂಗಸರು, ತಮ್ಮ ಕೆಲಸಕಾರ್ಯಗಳನ್ನು ಬಿಟ್ಟು, ಹನುಮಾನನನ್ನು ಮುದ್ದಿಸಿ ಆಡಿಸಲು ಮುಂದಾದರು. ಹನುಮಾನನು ಅವರೆಲ್ಲರ ಕೈಗೂಸಾಗಿ ಬಳೆದು ಬಾಲಕನಾದನು.

ವೀರಕೇಶರೀಯು ಹನುಮಾನನಿಗೆ ಶುಭಮುಹೂರ್ತದಲ್ಲಿ ಉಪನಯನ ಸಂಸ್ಕಾರವನ್ನು ನಡೆಸಿದನು. ಆ ವೇಳೆ ವಿದ್ಯಾರ್ಜನೆಗಾಗಿ ಹನುಮಾನನು ಸೂರ್ಯದೇವನ ಶಿಷ್ಯನಾದನು. ಆತನೊಡನೆ ಇದ್ದು ಬ್ರಹ್ಮಚರ್ಯ ವ್ರತ ಮತ್ತು ಶಿಷ್ಯತ್ವದ ನಿಯಮಗಳನ್ನು ಪಾಲಿಸುತ್ತಾ ಕಿಂಚಿತ್ ಸಮಯದಲ್ಲಿಯೇ ವೇದ ಶಾಸ್ತ್ರ ಮತ್ತು ಇತರ ಗ್ರಂಥಗಳಲ್ಲಿ ಪೂರ್ಣಜ್ಞಾನವನ್ನು ಸಂಪಾದಿಸಿದನು. ವಾಲಖಿಲ್ಯಾದಿ ಋಷಿಗಳು ಹನುಮಾನನ ಬುದ್ಧಿಚಾತುರ್ಯವನ್ನು ಕಂಡು, ಚಕಿತರಾಗುತಿದ್ದರು. ಜ್ಞಾನಿಗಳ ವರ್ಗದಲ್ಲಿ ಹನುಮಾನನು ಅಗ್ರಗಣ್ಯನಾದನು.

ಈ ಕಾಲದಲ್ಲಿ ಹನುಮಾನನು ಬ್ರಹ್ಮಚರ್ಯಪಾಲನೆ, ಋಷಿಗಳ ಆಜ್ಞಾಪಾಲನೆ, ಸಹಪಾಠಿಗಳಲ್ಲಿ ವಾತ್ಸಲ್ಯದಿಂದ ಇರುತಿದ್ದನು ಅಲ್ಲದೆ ನಿತ್ಯನಿಯಮಿತ ವ್ಯಾಯಾಮದಿಂದ ದೃಢಕಾಯನೂ, ತೇಜೋವಂತನೂ ಆಗಿ ಎಲ್ಲರಿಂದಲೂ "ಬಜರಂಗಬಲೀ" ಎಂಬ ಹೆಸರಿನಿಂದ ಕರೆಯಲ್ಪಟ್ಟನು.

ಹನುಮಾನನು ವಿದ್ಯಾವ್ಯಾಸಂಗವನ್ನು ಪೂರೈಸಿ, ಸೂರ್ಯ ಹಾಗು ಋಷಿವರ್ಯರಿಂದ ಆಶೀರ್ವದಿಸಿಕೊಂಡು, ಅವರೆಲ್ಲರಿಂದ ಬೀಳ್ಕೊಂಡು, ಸ್ವಕುಟೀರವನ್ನು ಸೇರಿದನು. ಅಮೇಲೆ ಅಲ್ಲಿ ಮಾತಾಪಿತೃಗಳ ಸೇವೆಯನ್ನು ಮಾಡತೊಡಗಿದನು. ಅವನು ಮಾತಾಪಿತೃಗಳ ಪ್ರೀತಿಗೆ ಪಾತ್ರನಾದನು.

ಆ ಕಾಲದಲ್ಲಿ ವಾಲಿಯು ವಾನರ ರಾಷ್ಟ್ರದ ಪ್ರಧಾನ ರಾಜನಾಗಿದ್ದನು. ಈತನು ಮಹಾಬಲಿಷ್ಠನೂ, ಪರಾಕ್ರಮಿಯೂ ಆಗಿದ್ದನು. ಈತನು ತನ್ನ ರಾಷ್ಟ್ರದ ವಿದ್ವದ್‌ಜನರನ್ನೂ, ಶಕ್ತಿಸಂಪನ್ನರನ್ನೂ ರಾಜಭವನಕ್ಕೆ ಆಹ್ವಾನಿಸಿ ಸನ್ಮಾನಿಸುತಿದ್ದನು. ಅಂತೆಯೇ ಹನುಮಾನನ ಶಕ್ತಿ ಸಾಮರ್ಥ್ಯವನ್ನೂ ಬುದ್ಧಿ ವೈಖರಿಯನ್ನೂ ಕೇಳಿ, ತಿಳಿದು, ಅವನನ್ನು ರಾಜಮಂದಿರಕ್ಕೆ ಆಮಂತ್ರಿಸಿ ತನ್ನ ಸೈನಿಕ ಪಡೆಯ ಸೇನಾನಾಯಕನನ್ನಾಗಿ ನೇಮಿಸಿದನು. ವೀರಕೇಶರೀ ಮತ್ತು ಅಂಜನಾದೇವಿಯರು, ಹನುಮಾನನಿಗೆ ದೊರೆತ ರಾಜಸನ್ಮಾನದಿಂದಲೂ, ರಾಷ್ಟ್ರಸೇವಾಕಾರ್ಯದ ಅತ್ಯುನ್ನತ ಭಾಗ್ಯದಿಂದಲೂ ''ಇಂತಹ ಪುತ್ರನನ್ನು ಹಡೆದುದಕ್ಕೆ ನಿಜಕ್ಕೂ ತಾವು ಧನ್ಯರಾದೆವು'' ಅನ್ನುತ್ತಾ ಹರ್ಷಿತರಾದರು.

ಹನುಮಾನನು ವಾನರರಾಜ್ಯದ ರಕ್ಷಣೆಯನ್ನು ದಕ್ಷತೆಯಿಂದ ನಡೆಯಿಸುತಿದ್ದನು. ಈತನ ಬ್ರಹ್ಮಚರ್ಯ ಬಲದಿಂದ, ದಿವ್ಯತೇಜಸ್ಸಿನ ಪ್ರಭಾವದಿಂದ ಯಾವತ್ತು ಕಾರ್ಯಗಳು, ಸಫಲತೆಗೊಳ್ಳುತಿದ್ದುವು. ಕೆಲವೊಮ್ಮೆ ರಾಜನಾದ ವಾಲಿಯೂ ಹನುಮಾನನ ಕ್ರಿಯಾಶೀಲತೆಯ ದಕ್ಷತೆಯ ಬಗೆಗೆ ತಲೆದೂಗುತಿದ್ದನು.

ಒಮ್ಮೆ ವಾನರರಾಜನಿಗೂ, ಮಾಯಾವಿ ಎಂಬ ರಕ್ಕಸನಿಗೂ ಸಂಗ್ರಾಮ ನಡೆಯಿತು. ಆ ಹದನದಲ್ಲಿ ಮಾಯಾವಿಯು ಓಡಿ ಗುಹೆಯೊಂದನ್ನು ಹೊಕ್ಕನು. ವಾಲಿಯು ಆತನನ್ನು ಕೊಲ್ಲಲು ಬೆನ್ನಟ್ಟಿದನು. ಅಲ್ಲಿ ಗುಹೆಯ ಒಳಸಾಗುವ ಮೊದಲು ತನ್ನ ಸಹಾಯಕ್ಕಾಗಿ ಧಾವಿಸಿ ಬಂದ ಸುಗ್ರೀವನಿಗೆ "ಸಹೋದರನೇ! ನೀನು ನನಗಾಗಿ ಹನ್ನೆರಡು ದಿನಗಳ ತನಕ ಗುಹೆಯ ದ್ವಾರದಲ್ಲಿ ಕಾದಿರು" ಎಂದು ಸೂಚಿಸಿ ರಾಕ್ಷಸನನ್ನು ಕೊಲ್ಲಲು ಗವಿಯನ್ನು ಹೊಕ್ಕನು.

ವಾಲಿಯು ಮಾಯಾವಿಯೊಂದಿಗೆ ಹೋರಾಡಿದನು. ಆ ಹೋರಾಟದ ಕೊನೆಯಲ್ಲಿ ಮಾಯಾವಿಯು ಮಡಿದನು. ಆತನು ಸಾಯುವ ಮೊದಲು "ಹಾ! ತಮ್ಮಾ, ಹಾ ಸುಗ್ರೀವ!" ಎಂಬ ಚೀರಾಟಮಾಡಿದನು. ಅದರೊಂದಿಗೆ ಗುಹೆಯಿಂದ ರಕ್ತ ಪ್ರವಹಿಸಿತು. ಸುಗ್ರೀವನು ಆ ರಕ್ಕಸನ ಮೋಸವನ್ನು ತಿಳಿಯದೆ, ವಾಲಿಯು ಯುದ್ಧದಲ್ಲಿ ಮಡಿದನೆಂದು ಭಾವಿಸಿ "ಇನ್ನು ಈ ರಕ್ಕಸನ ಕಾಟ ರಾಷ್ಟ್ರಕ್ಕೆ ಒದಗಬಾರದೆಂದು, ಗುಹೆಯ ದ್ವಾರವನ್ನು ದೊಡ್ಡ ಬಂಡೆಯೊಂದರಿಂದ ಮುಚ್ಚಿಟ್ಟು, ಅಣ್ಣನ ವಿಯೋಗ ದುಃಖ ತಡೆಯದೆ ನಗರಕ್ಕೆ ಮರಳಿದನು. ಅಲ್ಲಿ ಅಣ್ಣನಿಗೆ ಮಾಡಬೇಕಾದ ಸಂಸ್ಕಾರವನ್ನು ಪೂರೈಸಿದನು. ಅನಂತರ ಮಂತ್ರಿ ಶ್ರೇಷ್ಠರ, ಸೇನಾನಾಯಕರ ಹೇಳಿಕೆಯ ಮೇರೆಗೆ ಸುಗ್ರೀವನು ವಾನರರಾಜನಾದನು.

ಅತ್ತ ವಾಲಿಯು ರಕ್ಕಸನನ್ನು ಕೊಂದ ಉಬ್ಬರದಲ್ಲಿ, ಗುಹೆಯ ಹೊರಬರುತ್ತಾ ಗವಿಯ ದ್ವಾರ ಮುಚ್ಚಿರುವುದನ್ನು ಕಂಡನು. "ಸಹೋದರನು ರಾಜ್ಯಲಾಲಸೆಯಿಂದ ದ್ವಾರವನ್ನು ಮುಚ್ಚಿರಬೇಕು!" ಎಂದು ರೊಚ್ಚಿಗೆದ್ದು, ತನ್ನ ಶಕ್ತಿಸಾಮರ್ಥ್ಯದಿಂದ ಆ ಬಂಡೆಯನ್ನು ಹುಡಿಮಾಡಿ, ರಾಜಧಾನಿ ಕಿಷ್ಕಿಂಧೆಯತ್ತ ಪ್ರಳಯದ ಭೈರವನಂತೆ ಬಂದನು. ಅಲ್ಲಿ ರಾಜನಾಗಿ ಸಿಂಹಾಸನದ ಮೇಲಿದ್ದ ಸುಗ್ರೀವನನ್ನು ಕಂಡು ಕೋಪಗೊಂಡನು. ಆಗ ಸುಗ್ರೀವನು ಕೈಜೋಡಿಸಿ ನಿಜಸಂಗತಿಯನ್ನು ವಿಸ್ತರಿಸಿದನು. ಅದರೂ ವಾಲಿಯು ಒಲ್ಲದೆ, ಸುಗ್ರೀವನನ್ನು ಕೊಲ್ಲಲು ಹಳಚಿದನು. ಆಗ ಜಾಂಬವ, ಸುಷೇಣಾದಿಗಳು "ಸತಿ, ಸಹಜಾತ, ಸುತರುಗಳನ್ನು ಕೊಲ್ಲುವುದು ನೀತಿಯಲ್ಲ" ಎಂದು ಸಾರಿದರು. ಆಗ ವಾಲಿಯು ಸುಗ್ರೀವನನ್ನು ರಾಜ್ಯದಿಂದ ಹೊರಕ್ಕೆ ಅಟ್ಟಿ, ಅವನ ಹೆಂಡತಿಯನ್ನು ಸ್ವಾಧೀನೀಕರಿಸಿದನು. ಆಗ ನೀತಿಜ್ಞನಾದ ಹನುಮಾನನು "ರಾಜನೇ, ಸಹೋದರನನ್ನು ರಾಜ್ಯಭ್ರಷ್ಟನನ್ನಾಗಿಸಿದುದು ತೀರಾ ಅನುಚಿತವು. ಅದಲ್ಲದೆ ಸೋದರನು ಜೀವಂತನಿರುವಾಗಲೇ ಆತನ ಮಡದಿಯನ್ನು ಸ್ವಾಧೀನೀಕರಿಸುವುದು ಅನ್ಯಾಯವು. ಇನ್ನಾದರೂ ಈ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ತೀವ್ರ ಆತನಲ್ಲಿ ಪ್ರೇಮ, ಆದರವನ್ನು ತೋರಿಸಿ ರಾಜಭವನಕ್ಕೆ ಬರಮಾಡು" ಎಂದು ವಿನಂತಿಸಿದನು. ಬುದ್ಧಿವಿಕಲಿತನಾದ ವಾಲಿಯು ಅದೆಲ್ಲವನ್ನು ತಿರಸ್ಕರಿಸಿದನು.

ಆಗ ವೀರ, ಧೀರ, ಪುರುಷನಾದ ಹನುಮಾನನು ಆ ಅನ್ಯಾಯದ ವಿರುದ್ಧ ಸಟೆದು ನಿಂತು, ರಾಜನ ನೌಕರಿಗೆ ತಿಲಾಂಜಲಿಯನ್ನಿತ್ತು, ಸುಗ್ರೀವನ ಬಳಿಗೆ ಸಾಗಿದನು. ನಳ, ನೀಲ ಮೊದಲಾದವರು ಆತನನ್ನು ಹಿಂಬಾಲಿಸಿದರು.

[ಸಶೇಷ]

---

● ಅಸ್ಸಾಂ, ಬಿಹಾರಗಳಲ್ಲಿ ಲಕ್ಷಾಂತರ ಜನರು ನೆರೆಹಾವಳಿಯಿಂದ ಪೀಡಿತರಾಗಿರುವರು. ಉತ್ತರಪ್ರದೇಶದ ಪೂರ್ವ ಭಾಗದಲ್ಲೆ ಹತ್ತು ಲಕ್ಷ ಜನರು ನಿರಾಶ್ರಿತರಾಗಿರುವರೆನ್ನಲಾಗಿದೆ. ನೂರಾರು ಪ್ರಾಣಗಳೂ ನಷ್ಟವಾಗಿವೆ. ಸಿಕ್ಕಿಮ್ ಪ್ರಾಂತದಲ್ಲಿ ಒಂದೇ ಗಂಟೆಯಲ್ಲಿ ಐದು ಕಡೆಗಳಲ್ಲಿನ ಸಂಕಗಳು ಕುಸಿದುಬಿದ್ದಿವೆ. ಅಸ್ಸಾಂ ಸರಕಾರವು ಪ್ರವಾಹಪೀಡಿತರಿಗೆ ಉಪಶಮನವೀಯಲು ಕೇಂದ್ರ ಸರಕಾರದೊಡನೆ ಒಂದು ಕೋಟಿ ರೂಪಾಯಿಗಳ ಸಹಾಯವನ್ನು ಅಪೇಕ್ಷಿಸಿದೆ.

---

ಹಿಂದಕ್ಕೆ ಬರುವಾಗಲೂ ಕೂಡ್ಲ ಮದುಮಗಳ ದಿಬ್ಬಣ ಬಹಳ ಗಡದಿನಿಂದ ಸಾಗಿತು.

ಸೊರಲಕಟ್ಟದ ಮೇಲೆ ದಿಬ್ಬಣ ಮುಂದಕ್ಕೆ ದಾಟುತ್ತಿತ್ತು. ಮದುಮಗಳು ಕೂತ ಪಲ್ಲಕಿ ಒಡ್ಡಿನ ನಡುವಂತರಕೆ ತಲಪಿತು—ಇಲ್ಲ—ಅನ್ನುವಷ್ಟರಲ್ಲಿ—ಹಾ!—ಒಡ್ಡು ಏಕಾಏಕಿ ಮಧ್ಯದಲ್ಲೇ ಜಗ್ಗಿ ಕುಸಿದುಬಿತ್ತು!

ಅಚೆ ಪಾರ್ಶ್ವದಲ್ಲಿದ್ದ ಮಂದಿಗಳು ಆಚೆಗೆ; ಈಚೆಯಲ್ಲಿದ್ದವರು ಈಚೆಗಾದರು. ಮದುಮಗಳು ಕೂತ ಪಲ್ಲಕಿ ಕೆಳಗೆ ನೇರ ಗುಂಡಿಯೊಳಗೆ ಉರುಳಿತು!

ಹಾಹಾಕಾರ! ಕೋಲಾಹಲ! ದಿಬ್ಬಣದ ಜನರು, ಕೆಲಸದಾಳುಗಳು—ಎಲ್ಲರೂ ದಿಗ್ಮೂಢರಾಗಿ ಟಕಮಕನೇ ಗುಂಡಿಯಲ್ಲಿ ತೇಲುತ್ತಿರುವ ಪಲ್ಲಕಿಯನ್ನು ನೋಡುತ್ತಿದ್ದಂತೇ ಪಲ್ಲಕಿ ನೀರಿನೊಳಗೆ ಮುಳುಗಿ ಪುನಃ ಮೇಲಕ್ಕೆ ಬಂತು. ಮೇಲೆ ನಿಂತುಕೊಂಡು ನೋಡುತ್ತಿದ್ದ ಜನಸಂದಣಿಯಲ್ಲಿ ಒಬ್ಬನಿಗೂ ಆ ಗಹನ ಗಾಂತ್ರಕ್ಕೆ ಹಾರಿ ಮದುಮಗಳನ್ನು ಬಚಾಯಿಸುವಷ್ಟರ ಮಟ್ಟಿನ ಸಾಹಸವಾಗಲಿ, ಎದೆಗಾರಿಕೆಯಾಗಲಿ ಬಾರದೇ ಹೋಯಿತು.

ಪ್ರಸ್ತುತ ನೀರಿನ ಮೇಲಕ್ಕೆ ಪಲ್ಲಕಿ ಪುನಃ ಬಂದಾಗ, ಮದುಮಗಳಾದ ಬಾಲೆ ಮಾಡೆದಿ ಪಲ್ಲಕಿಯಿಂದ ಸಿಡಿದುಹೋಗಿ ಮತ್ತೊಂದೆಡೆಯಲ್ಲಿ ತೇಕುಮುಳುಗಾಗಿ ಮೇಲುಬ್ಬುಶವನ್ನು ಬಿಡುತ್ತ ಹೆಣಗುತ್ತಿದ್ದಳು!

ಅನಾಹುತದ ವಾರ್ತೆ ದಾವಾಗ್ನಿಯಂತೆ ಹರಡಿ ವರನ ಮನೆಗೂ ಮುಟ್ಟಿತ್ತು.

ಒಡ್ಡಿನ ಸ್ಥಳಕ್ಕೆ ವರನು ಧಾವಿಸಿ ಬಂದನು. ತನ್ನ ಭಾವೀ ಮದುಮಗಳು ಒಡ್ಡಿನ ಗಾಂತ್ರದಲ್ಲಿ ಅಸುರು ಸುರುಬಿಡುತ್ತ ಜೀವನಮರಣ ಸಂಕಟಪಡುತ್ತಿರುವ ಹೃದಯಭೇದಕ ದೃಶ್ಯವನ್ನು ಕಾಣುತ್ತ ವರನು ನೀರಿಗೆ ಹಾರಿ ಅವಳನ್ನು ರಕ್ಷಿಸುವುದಕ್ಕೆ ಉದ್ಯುಕ್ತನಾದನು.

"ಹಾ ನನ್ನ ಮದುಮಗಳೇ! ಮದುಮಗಳೇ!!...."—ಹೀಗೆನ್ನುತ್ತ ಒಡನೇ ಗುಂಡಿಗೆ ದುಮುಕುವನಿದ್ದ!

ಕುಳುಸಂಧಿಯ ಕತೆ:—೩೫.

# ಪ್ರತಿಜ್ಞಾಪೂರ್ತಿ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಅನಿತರಲ್ಲಿ ಕೂಡಿದ ಮಂದಿಗಳು ಅವನನ್ನು ಅಡ್ಡವಿಸಿ ಹಿಡಿದು ನಿಲ್ಲಿಸಿದರು.

ಬಾಲೆ ಮಾಡೆದಿಯು ತಾಯಿಯಾದ ದೇವಿ ಮಾಡೆದಿ, ತಂದೆಯಾದ ಸೊರಲಗುತ್ತಿನ ಮಾಡ ಮತ್ತು ಏಳು ಮಂದಿ ಸೋದರರು ತಲೆ ತಲೆ ಎದೆ ಎದೆ ಒಡಿದುಕೊಳ್ಳುತ್ತ ಒಡ್ಡಿನ ಈಚೆ ಪಾರ್ಶ್ವದಲ್ಲಿ ನಿಂತುಕೊಂಡು ಒಂದೇ ಸವನೆ ಪ್ರಲಾಪಿಸುತ್ತಿದ್ದರು. ದೇವಿ ಮಾಡೆದಿ ತಾನು ಅಂದು ಆ ಸೊರಲ ಕಟ್ಟಕ್ಕೆ ನೀರಿಗೆ ಬಂದು ಮೀನುಗಳನ್ನು ಉದ್ದೇಶಿಸಿ ಹೇಳಿದ ಯಾವ ವಚನವಿದೆಯೋ—ಅದನ್ನು—ಅವಳಾಗಿ ಈ ವರೆಗೆ ಯಾರ ಕಿವಿಗೂ ಹಾಕಿದ್ದಿಲ್ಲ!

ನೀರಿನಲ್ಲಿ ಅಂತ್ಯಾವಸ್ಥೆಪಟ್ಟು ಚಡಪಡುತ್ತಿರುವ ಬಾಲೆ ಮಾಡೆದಿ ಇದೀಗ ತನ್ನ ತಾಯಿಯನ್ನುದ್ದೇಶಿಸಿ ಹೀಗೆ ನುಡಿಯೆತ್ತಿದಳು:

"ತಾಯೀ! ನೀವು ಅಳುತ್ತಿರುವಿರಾ? ಅಂದು ನೀವು ಈ ಸೊರಲಕಟ್ಟಕ್ಕೆ ನೀರಿಗೆ ಬಂದವರು ಮೀನನ್ನು ನೋಡಿ ಅಪೇಕ್ಷಿಸಿ ಹೇಳಿದ ವಚನ ಉಂಟಲ್ಲವೇ? ಅದು—ಹೆಣ್ಣು ಹುಟ್ಟಲಾರದೆಂಬೊಂದು ಅಡರಿದ ಅತೃಪ್ತಿಯಿಂದುಂಟಾದ ನಿಮ್ಮ ಮನಃಕಷಾಯದ ಪ್ರೇಕ್ಷೆಯಾಗಿರಬಹುದು. ಜನಹಿತಕ್ಕಾಗಿ ದೈವಮಾಯೆಯೊಂದು ನಿಮ್ಮನ್ನು ಪ್ರೇರಿಸಿದುದರಿಂದ ನಿರ್ಮಲ ಹೃದಯದಿಂದ ನೀವು ಉಚ್ಚರಿಸಿದ ಪ್ರತಿಜ್ಞೆಯೋ, ಹರಕೆಯೋ ಆಗಿದ್ದಿರಲೂ ಸಾಕು. ಅಂತೂ ಅದನ್ನು ನೀವು ಪೂರಯಿಸುವುದೇ ಸರಿ. ಸೊರಲಕಟ್ಟ ನಿರ್ಮಾಣವಾಗಲೇ ಬೇಕು! ಇದೊ! ಗುಂಡಿಯಲ್ಲಿ ನಾನು ನಿರಾಯಾಸವಾಗಿ ನೇರ ಸಿಕ್ಕೊಂಡಿದ್ದೇನೆ. ಪ್ರತಿಜ್ಞೆಗೈದಂತೆ ನಿಮ್ಮ ಹೊಟ್ಟೆಯಲ್ಲಿ ಉದಯಿಸಿದೆನು; ನಿಮ್ಮ ಪ್ರತಿಜ್ಞೆ ಪೂರ್ತಿಮಾಡಲಿಕ್ಕಾಗಿ ಪ್ರಾಣಾಹುತಿ ಕೊಡುತ್ತಿದ್ದೇನೆ. ನನ್ನನ್ನು ಯಾರೂ ರಕ್ಷಿಸಬೇಕಾಗಿಲ್ಲ. ನನ್ನ ಪ್ರಾರಬ್ಧವನ್ನು ಯಾರಿಗೂ ಅಳಿಸಲು ಸಾಧ್ಯವಿಲ್ಲ. ಆದರೆ ನಾನು ಎರಗುವಂಥ ಕಜ್ಜ ಬಹಳ ದೊಡ್ಡದಾದ–ಮಹಾ ಘನವಾದ–ನಾನೀವರೆಗೂ ಮಾಡದಂಥ—ಚಿರಸ್ಮರಣೀಯವೆನಿಸುವ–ಅತೀ ದೂರ–ಅನಂತ ಶಾಂತಿಗೆ ಕೊಂಡೊಯ್ಯುವ ಉದಾತ್ತ ಕರ್ತವ್ಯ ತಾನೇ! ತಾಯೀ! ನಿಮ್ಮ ಹೊಟ್ಟೆಯಿಂದ ಹೊರಟುಬಂದ ದೋಷಕ್ಕೆ, ನನ್ನನ್ನು ಕೊಂಡಾಡಿದ ನಲ್ಮೆಗೆ ನನ್ನ ನೆತ್ತಿಗೆ ಒಂದು ಹಾರೆ ಮಣ್ಣನ್ನು ಹಾಕಿರಿ. ವಿಶಾಲ ಸೊರಲಗ್ರಾಮವು ಈ ಸೊರಲಕಟ್ಟಕ್ಕೆ ಅರ್ಪಣವಾದ ನನ್ನ ದೇಹಾಹುತಿಯಿಂದ ಸತ್ಫಲವನ್ನು ಅನುಭೋಗಿಸುವಂತಾಗಲಿ!"

ತಂದೆಗೆ ಹೇಳಿದಳು:

"ತಂದೇ! ಪಾಪಕ್ಕೆ ಹುಟ್ಟಿಸಿದಿರಿ; ದೋಷಕ್ಕೆ ಸಾಕಿದಿರಿ. ಒಂದು ಹಾರೆ ಮಣ್ಣನ್ನು ಕೇರಿ ನನ್ನ ನೆತ್ತಿಗೆ ಬಿಸಾಕಿರಿ."

ಅಣ್ಣಂದಿಯರಿಗೆ ಒರೆದಳು:

"ಅಣ್ಣಂದಿಯರೇ! ನನಗಿಂತ ಮೊದಲು ನೀವು ಜನನವಾದಿರಿ. ನಿಮ್ಮ ಬೆಂಗಡೆ ನಾನು ಹುಟ್ಟಿಬಂದ ನಿಮಿತ್ತ ಏಳು ಹಾರೆ ಮಣ್ಣು ತೆಗೆದು ನಿಮ್ಮ ತಂಗಿಯ ನೆತ್ತಿಗೆ ಒಗೆಯಿರಿ."

ಹಾಗೇ ಎಲ್ಲರೂ ದೂಂಪಿಕುತ್ತ ಮೇಲಿಂದ ಒಂದೊಂದು ಹಾರೆ ಮಣ್ಣು ತೆಗೆದು ಬಾಲೆ ಮಾಡೆದಿಯ ನೆತ್ತಿಗೆ ಹಾಕಿದರು. ಬಾಲೆ ಮಾಡೆದಿಯ ಕಂಠದ ತನಕ ಗುಂಡಿ ತುಂಬಿತು!

ಕೊನೆಗೆ ತನ್ನ ನೂತನ ವಿವಾಹಿತ ವರನನ್ನುದ್ದೇಶಿಸಿ ಬಾಲೆ ಮಾಡೆದಿ ಈ ರೀತಿ ನುಡಿ ಬಿತ್ತರಿಸಿದಳು:

"ಮದುಮಗನವರೇ! ನನ್ನ ಪಾಣಿಗ್ರಹಣದಿಂದಾದ ಮನೋಬಂಧನವಲ್ಲದೆ ನನ್ನ ನಿಮ್ಮಲ್ಲಿ ಶರೀರ ಕೂಟದ ಬಂಧನವಾಗಲಿಲ್ಲ. ನಾನು ಭಾಗ್ಯಹೀನೆ. ಬರುವ ಜನ್ಮದಲ್ಲಾದರೂ ನಾವು ಸತಿಪತಿಗಳಾಗಿ ಬಾಳೋಣ! ಇದೀಗ ಒಂದು ಹಾರೆ ಮಣ್ಣು ತೆಗೆದು ನನ್ನ ನೆತ್ತಿಗೆ ಎಸೆದು ಗೌರವಿಸಿರಿ. ನನ್ನ ಸಮಾಧಿಯ ಅಂತ್ಯವಿಧಿಯನ್ನು ಅಲ್ಲಿಗೆ ಸಮಾಪ್ತಿಗೊಳಿಸಿರಿ, ನನ್ನ ಮದುಮಗಾ!"

ಕಂಗಳಿಂದ ಕಣ್ಣೀರ ಪ್ರವಾಹವನ್ನು ದುರಿಸುತ್ತ ನಡಗುವ ಕೈಯಿಂದ ಮದುಮಗನು ಒಂದು ಹಾರೆ ಮಣ್ಣನ್ನು ತೆಗೆದು ಎಸೆದನು.

ಅಗತಾನೇ ಗುಂಡಿ ತುಂಬಿತು; ಗ್ರಾಮಸ್ಥರು ಗುಂಡಿ ತುಂಬಿಸುವುದಕ್ಕೆ ಎಷ್ಟೆಷ್ಟು ಪ್ರಯತ್ನಿಸಿದರೂ ನಿಲ್ಲದೇ ಹೋದ ಒಡ್ಡು—ಸೊರಲಕಟ್ಟ—ಸಂಪೂರ್ಣಸಿಕೊಂಡು ಸುಭದ್ರವಾಗಿ ಎದ್ದು ಕೊಂಡಿತು! ಅದರೊಂದಿಗೆ ಬಾಲೆ ಮಾಡೆದಿಯ ಸಮಾಧಿಯೂ ಆಯಿತು!!

ದಿಬ್ಬಣಿಗರು ಮತ್ತು ಕೂಡಿದ ಅಪಾರ ಜನಸ್ತೋಮ ನತಮಸ್ತಕರಾಗಿ ಹುತಾತ್ಮಳಿಗೆ ಬಾಷ್ಪಾಂಜಲಿಯನ್ನು ಸುರಿಸಿದರು!

ಈ ಚಾಪ್ರಾರಬ್ಧವೆ ವಿಧಿನಿಯಮದಂತೆ ಬೆಂಬಲಿಸುವುದು!

— ಎಂ. ನಾರಾಯಣ,
ಮಂಗಳೂರು.

— —




## ಲಾ ಕೊಲೇಜ್ ಯೂನಿಯನ್ ಚುನಾವಣೆ

ಉಡುಪಿ ಲಾ ಕೊಲೇಜ್ ಯೂನಿಯನಿನ ಚುನಾವಣೆಯು ಇತ್ತೀಚೆಗೆ ಜರಗಿದಾಗ ಶ್ರೀ। ಯಸ್. ಚಂದ್ರಹಾಸ ಸೆಟ್ಟಿಯವರು ಅಧ್ಯಕ್ಷರಾಗಿಯೂ, ಶ್ರೀ। ಕೆ. ಜಗನ್ನಾಥ ಆಳ್ವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರು.

## ಬಾವಿಗೆ ಬಿದ್ದವಳು ರಕ್ಷಿಸಲ್ಪಟ್ಟಳು

ಕಳೆದ ತಾ. 27ರಂದು ಸಂಜೆ ಮಂಗಳೂರು ಬೆಂದೂರಿನಲ್ಲಿರುವ ಸಿಲ್ವಾ ಕಂಪೌಂಡಿನ ಬಳಿ ಅಕಸ್ಮಾತ್ ಬಾವಿಗೆ ಬಿದ್ದ ಜಾನಕಿ ಎಂಬ 40 ವರ್ಷ ಪ್ರಾಯದ ಮಹಿಳೆಯನ್ನು, ಸಕಾಲದಲ್ಲಿ ಫಾಯರ್ ಸರ್ವೀಸ್‌ದವರ ಸಹಾಯ ಒದಗಿದುದರಿಂದ ಮೇಲಕ್ಕೆ ತೆಗೆದು ಸಂರಕ್ಷಿಸಲಾಯಿತು.

## ಶಿವರಾಮ ಕಾರಂತರಿಗೆ ನಿಧಿ ಅರ್ಪಣೆ

ಪ್ರಕೃತ ಉಡುಪಿಯಲ್ಲಿ ಯಕ್ಷಗಾನ ಕಲಾ ಪರಿಣತರ ತಂಡವೊಂದನ್ನು ರೂಪಿಸುವ ಕಾರ್ಯದಲ್ಲಿ ಮಗ್ನರಾಗಿರುವ ಪ್ರಸಿದ್ಧ ಕನ್ನಡ ಸಾಹಿತಿ ಶ್ರೀ। ಕೋಟ ಶಿವರಾಮ ಕಾರಂತರಿಗೆ, ಅವರು ಯಕ್ಷಗಾನದ ಪುನರುಜ್ಜೀವನದ ದಿಶೆಯಲ್ಲಿ ಕೈಕೊಂಡ ಪ್ರಯತ್ನಗಳಿಗೆ ಯಶಸ್ಸು ಕೋರಿ ಹಂಗಾರಕಟ್ಟೆಯ ಕರ್ನಾಟಕ ಸಂಘದ ಪರವಾಗಿ ಕಳೆದ ತಾ. 27ರಂದು ನಿಧಿಯೊಂದನ್ನು ಕಾರಂತರ ಯಕ್ಷಗಾನ ಕಲಾ ತರಬೇತಿ ಕೇಂದ್ರದಲ್ಲಿಯೇ ಅರ್ಪಿಸಲಾಯಿತೆಂದು ತಿಳಿದುಬಂದಿದೆ.

## ಶ್ರಮದಾನ

ಮಿತ್ತಬಾಗಿಲು ಪಂಚಾಯತ್ ಚೆರ್‌ಮೆನ್ ಶ್ರೀ। ವೆಂಕಟ ಸುಬ್ಬರಾವ್ ಮತ್ತು ಜೆ. ವಾಸುದೇವ ಪ್ರಭುರವರ ನೇತೃತ್ವದಲ್ಲಿ ನೂತ್ತ ನೂರು ಮಂದಿಯ ತಂಡವೊಂದು ಶ್ರಮದಾನದ ಮೂಲಕ ಶಾಲಾ ಆಟದ ಸ್ಥಳ ತಯಾರಿಸಿದುದು ವರದಿಯಾಗಿದೆ.

## ವಯಸ್ಕರ ಶಾಲೆ

ನೇರಳಕಟ್ಟೆ ಯುವಕ ಮಂಡಲದ ವತಿಯಿಂದ ವಿಟ್ಲ ಡಿಪ್ಯೂಟಿ ಬ್ಲೊಕ್ ಡೆವಲಪ್‌ಮೆಂಟ್ ಆಫೀಸರ ಶ್ರೀ। ಎಂ. ರಂಗೇ ಗೌಡರ ಅಧ್ಯಕ್ಷತೆಯಲ್ಲಿ ವಯಸ್ಕರ ರಾತ್ರಿ ಶಾಲೆಯೊಂದನ್ನು ಇತ್ತೀಚೆಗೆ ನೆಟ್ಟಮುಡ್ನೂರ್ ಗ್ರಾಮದ ಪಟೇಲ್ ಶ್ರೀ। ಕೆ. ಇಂದುಹಾಸ ರೈಗಳವರು ಉದ್ಘಾಟಿಸಿದರು.

## ಸಂಗೀತ ಕಚೇರಿ

ಮಂಗಳೂರು ಲಲಿತ ಕಲಾ ಮಂಡಳಿಯ ಆಶ್ರಯದಲ್ಲಿ ದಕ್ಷಿಣ ಹಿಂದೂಸ್ಥಾನದ ಪ್ರಸಿದ್ಧ ಸಂಗೀತಗಾರರಲೊಬ್ಬರಾದ ಗಾನಸುಧಾರಕ ಶ್ರೀ। ಬಾಲಮುರಲೀ ಕೃಷ್ಣರ ಸಂಗೀತ ಕಚೇರಿಯೊಂದು ಕಳೆದ ತಾ. 26ರಂದು ಸಂಜೆ ಸ್ಥಳೀಯ ಡೊನ್ ಬೊಸ್ಕೊ ಹೊಲಿನಲ್ಲಿ ಜರಗಿತು. ಸುಮಾರು 3 ಗಂಟೆಗಳ ಕಾಲ ನಡೆದ ಈ ಕಚೇರಿಯಲ್ಲಿ ಶ್ರೀ। ಮುರಲೀ ಕೃಷ್ಣರು ಹಲಸ, ವಿನೋದಿನಿ, ಮಾರುವ, ಧನ್ಯಾಸಿ, ಕಲ್ಯಾಣಿ, ಅಭೇರಿ, ಶ್ರುತಿರಂಜನಿ ಮೊದಲಾದ ಕರ್ನಾಟಕಿ ರಾಗಗಳನ್ನು ಶ್ರೋತೃಗಳ ಮನತಣಿಸುವಂತೆ ಹಾಡಿದರು. ಅವರು ಹಾಡಿದ ಮೈಸೂರು ವಾಸುದೇವಾಚಾರ್ಯರ ರಚನದ ವಿನೋದಿನಿ ರಾಗವು ಅವರ ಅಸಾಧಾರಣ ಪ್ರತಿಭೆಯ ಪ್ರತೀಕವಾಗಿತ್ತು. ಶ್ರೀ। ಲಾಲ್ಗುಡಿ ಜಯರಾಮನ್‌ರವರು ವಾಯೊಲಿನ್‌ದಲ್ಲೂ, ಶ್ರೀ। ಟಿ. ಎ. ಗೋಪಾಲಕೃಷ್ಣನರವರು ಮೃದಂಗದಲ್ಲೂ ಶ್ರೀ। ಮುರಲಿಯವರಿಗೆ ಸಾಥಿಯಾಗಿದ್ದರು. ಕೊನೆಯಲ್ಲಿ ಶ್ರೀ। ಕೆ. ಆರ್. ಆಚಾರ್‌ರವರು ಧನ್ಯವಾದಾರ್ಪಣೆಗೈದರು.

## ಕೆಲಸದಲ್ಲಿ ಭಡ್ತಿ

ಮಂಗಳೂರು ಸರಕಾರೀ ಕೊಲೆಜಿನ ಲೆಕ್ಚರರ್ ಶ್ರೀಮತಿ ಎಚ್. ಪಾರ್ವತಿ ಬಾಯಿಯವರನ್ನು ಮೈಸೂರಿನಲ್ಲಿ ಡಿ. ಡಿ. ಪಿ ಐ ಕಚೇರಿಯಲ್ಲಿ ಕನ್ನಡ ವಿಚಾರದ ಇನ್ಸಪೆಕ್ಟರ್ ಆಗಿ ಭಡ್ತಿಗೊಳಿಸಲಾಗಿದೆಯೆಂದು ತಿಳಿದುಬರುತ್ತದೆ.

## ಮುನ್ಸೀಫರಾಗಿ ನೇಮಕ

ಮಂಗಳೂರಿನ ಎಡ್ವೊಕೇಟ್ ಶ್ರೀ। ಸೇವ ನಮಿರಾಜ ಮಲ್ಲರನ್ನು ಸಿವಿಲ್ ಜಡ್ಜ (ಮುನ್ಸೀಫ್)ರನ್ನಾಗಿ ಸೌಂದತ್ತಿಯಲ್ಲಿ ನೇಮಿಸಲಾಗಿದೆಯೆಂದು ಸರಕಾರೀ ಪ್ರಕಟಣೆಯೊಂದು ತಿಳಿಸುತ್ತದೆ.

## ಅಕ್ಕಿ ಮತ್ತು ಗೋದಿ ಆಮದು

ಮಂಗಳೂರಿಗೆ ಅಕ್ಕಿ ಮತ್ತು ಗೋದಿ ದಾಸ್ತಾನು ಬಂದಿದೆಯಾದುದರಿಂದ ಕದ್ರಿಯಲ್ಲೂ, ನಂದಿಗುಡ್ಡೆಯಲ್ಲೂ ನ್ಯಾಯಬೆಲೆಯ ಅಂಗಡಿಗಳನ್ನು ತೆರೆಯಲಾಗುವುದೆಂದು ನಗರಸಭಾಪತಿ ಶ್ರೀ। ಮಣೇಲ ಶ್ರೀನಿವಾಸ ನಾಯ್ಕರಿಂದ ತಿಳಿದುಬಂದಿದೆ. ಕೋಟೆಕಾರಿನಲ್ಲೊಂದು ಮತ್ತು ಇತರ 4 ತಾಲೂಕುಗಳಲ್ಲಿ ಒಂದೊಂದರಂತೆ ನ್ಯಾಯ ಬೆಲೆಯ ಅಂಗಡಿಗಳನ್ನು ಆರಂಭಿಸುವ ಆಶ್ವಾಸನೆಯಾಗಿದೆಯಾಗಿಯೂ ಕೇಳಬರುತ್ತದೆ.

## ಶ್ರೀ। ಬಿ. ಎನ್. ಗುಪ್ತಾ ಉಡ್ಪಿಯಲ್ಲಿ

ಅಖಿಲ ಭಾರತ ಉತ್ಪಾದಕರ ಸಮ್ಮೇಳನದ ಉಪಾಧ್ಯಕ್ಷ ಬೆಂಗಳೂರಿನ ಶ್ರೀ। ಬಿ. ಎನ್. ಗುಪ್ತಾರವರು ತಾ. 21ರಂದು ಉಡ್ಪಿಗೆ ಸಂದರ್ಶನವಿತ್ತಾಗ, ಸಮ್ಮೇಳನದ ದ. ಕ. ಜಿಲ್ಲಾ ಶಾಖೆಯ ಮಣಿಪಾಲದಲ್ಲಿ ಡಾ। ಟಿ. ಎಂ. ಪೈಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ। ಗುಪ್ತಾರವರನ್ನು ಸ್ವಾಗತಿಸಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೈಸರ್ಗಿಕ ಸಂಪತ್ತಿನಿಂದ ಕೈಗಾರಿಕಾ ಪ್ರಗತಿ ಸಾಧ್ಯವಿದೆಯೆಂದು ಶ್ರೀ। ಗುಪ್ತಾರವರು ಅಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು. ಕೊನೆಯಲ್ಲಿ ಶ್ರೀ। ಎ. ಜೆ. ಆಲ್ಸೆಯವರು ಧನ್ಯವಾದ ಅರ್ಪಿಸಿದರು.

## ಹೊಸ ಮುನ್ಸಿಫ್ ಮೆಜಿಸ್ಟ್ರೇಟರುಗಳು

ಹಂಗಾಮಿಯಾಗಿ ಮಂಗಳೂರಲ್ಲಿ ಮುನ್ಸಿಫ್ ಮೆಜಿಸ್ಟ್ರೇಟರುಗಳಾಗಿದ್ದ ಶ್ರೀ। ಸೀನಂ ಭಟ್ ಜೋಶಿ ಮತ್ತು ಶ್ರೀ। ಪಂಪಾ ಶಾಸ್ತ್ರಿಯವರನ್ನು ನಿವೃತ್ತಗೊಳಿಸಿ ಅವರ ಸ್ಥಾನದಲ್ಲಿ ಕ್ರಮವಾಗಿ ಶ್ರೀ। ಎಂ. ಆರ್ಯಮಿತ್ರ ಮತ್ತು ಶ್ರೀ। ಸಿ. ಎಂ. ಪಾಟೀಲ್‌ರವರನ್ನು ಸರಕಾರ ನೇಮಕ ಮಾಡಿರುವುದು.

## ಮನೆಹೊಕ್ಕು ಧಾಳಿ

ಪೆರುವಾಯಿಯಲ್ಲಿ ಹತ್ತುಮಂದಿ ಆಯುಧಧಾರಿಗಳು ನಾರಾಯಣ ಮಣಿಯಾಣಿ ಎಂಬವರ ಮನೆಯನ್ನು ಹೊಕ್ಕು ಅವರ ತಾಯಿಯನ್ನು ಹೊಡೆದು ಘಾಸಿಗೊಳಿಸಿ ಅಕ್ಕಿ ಮತ್ತು ಇತರ ಸೊತ್ತುಗಳನ್ನು ಬಲವಂತವಾಗಿ ಅಪಹರಿಸಿ ಕೊಂಡೊಯ್ದಿರುವರೆಂದು ತಿಳಿದುಬರುತ್ತದೆ. ವಿಟ್ಲ ಪೋಲೀಸರು ತನ್ಖಿ ನಡೆಸುತ್ತಿರುವರು.

## ಹೊಸ ಲೋಂಚ್ ಸರ್ವೀಸ್

ಉಳ್ಳಾಲ ಮತ್ತು ಇನ್ನಿತರ ಕಡೆಯ ಸಾರ್ವಜನಿಕರ ಅಪೇಕ್ಷೆಯಂತೆ ಕಳೆದ ತಾ. 22ರಿಂದ ಉಳ್ಳಾಲದಿಂದ ಮಂಗಳೂರಿಗೆ ಹೊಸ ಲೋಂಚ್ ಸರ್ವೀಸ್ ಆರಂಭವಾಗಿರುವುದು. ಟಿಕೇಟಿನ ದರವನ್ನು ಇಳಿಸಿ ಉಳ್ಳಾಲದಿಂದ ಮಂಗಳೂರಿಗೆ 12 ನ. ಪೈಸೆ, ಉಳ್ಳಾಲದಿಂದ ಬೆಂಗರೆಗೆ 10 ನ. ಪೈಸೆ ಮತ್ತು ಬೆಂಗರೆಯಿಂದ ಮಂಗಳೂರಿಗೆ 6 ನ. ಪೈಸೆ ಇಡಲಾಗಿದೆಯಲ್ಲದೆ ಶಾಲಾ ವಿದ್ಯಾರ್ಥಿಗಳಿಗೆ ರಿಯಾಯಿತಿ ದರವಿದೆಯೆಂದೂ ತಿಳಿದು

ಬರುತ್ತದೆ. ಪ್ರತೀ ದಿನ ಬೆಳಿಗ್ಗೆ 6-30 ಗಂಟೆಗೆ ಉಳ್ಳಾಲದಿಂದ ಸರ್ವೀಸು ಆರಂಭವಾಗುವುದು.

## ಕಬಡಿಯಲ್ಲಿ ವಿಜಯ

ಶ್ರೀಕೃಷ್ಣಾಷ್ಟಮಿ ಉತ್ಸವದ ಅಂಗವಾಗಿ ಅಶೋಕನಗರದ ಹಿಂದೂ ಧಾರ್ಮಿಕ ಸೇವಾ ಸಂಘದ ವತಿಯಿಂದ ಜರಗಿದ ಕಬಡಿ ಫೈನಲ್ ಪಂದ್ಯದಲ್ಲಿ ಕೇಸರಿ ಫ್ರೆಂಡ್ಸ್ ಕ್ಲಬ್‌ದವರು ಜಯಲಕ್ಷ್ಮಿ ಟೀಮನ್ನು 28:15 ಪ್ಯೊಂಟ್‌ಗಳಿಂದ ಜಯಿಸಿದರು.

## ಕನ್ನಡ ಸಂಘದ ನಿರ್ಣಯಗಳು

ಮೈಸೂರು ರಾಜ್ಯಕ್ಕೆ ಕರ್ನಾಟಕವೆಂದು ಪುನರ್ನಾಮಕರಣವಾಗಬೇಕು, ರಾಜ್ಯದ ಸರಕಾರೀ ಭಾಷೆ ಕನ್ನಡವಾಗಬೇಕು, ವಿಶ್ವವಿದ್ಯಾನಿಲಯದ ಮಟ್ಟದಲ್ಲೂ ಶಿಕ್ಷಣ ಮಾಧ್ಯಮ ಕನ್ನಡವಾಗಬೇಕು, ಕಾಸರಗೋಡಿನ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರುವಂತಾಗಬೇಕು ಎಂಬ ನಾಲ್ಕು ಮಹತ್ವದ ಗೊತ್ತುವಳಿಗಳು ಕಳೆದ ತಾ. 26ರಂದು ಬೆಳಿಗ್ಗೆ ಶ್ರೀ| ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ಕನ್ನಡ ಸಂಘದ ಮಹಾಸಭೆಯಲ್ಲಿ ಕೈಕೊಳ್ಳಲ್ಪಟ್ಟವೆ.

## ಯುವಕ ಕೊಂಗ್ರೆಸ್ ಸಭೆ

ಮಂಗಳೂರು ಸಿಟಿ ಯುವಕ ಕೊಂಗ್ರೆಸ್ಸಿನ ಸಾಪ್ತಾಹಿಕ ಸಭೆಯು ತಾ 26ನೇ ರವಿವಾರ ಪಡೀಲಿನಲ್ಲಿ ಶ್ರೀ| ಬಿ. ಲಕ್ಷ್ಮಣದೇವ ವಿದ್ಯಾರ್ಥಿಗಳ ಅಧ್ಯಕ್ಷತೆಯಲ್ಲಿ ಜರಗಿದಾಗ ಜಿಲ್ಲಾ ಯುವಕ ಕೊಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ| ಎಂ. ಜಯಾನಂದ ದೇವಾಡಿಗರು ಯುವಕ ಕೊಂಗ್ರೆಸ್ ಮತ್ತು ಸೇವಾ ದಳಗಳ ಸಂಘಟನೆಯ ಕುರಿತು ವಿವರಿಸಿ ಭಾಷಣ ಮಾಡಿದರು. ಮಾಜಿ ಎಂ. ಎಲ್. ಎ., ಶ್ರೀ| ಕೆ. ದೂಮಪ್ಪನವರು ಕೊಂಗ್ರೆಸ್ ಸರಕಾರದ ಸಾಧನೆಗಳನ್ನು ವಿವರಿಸಿದರು.

## ಸ್ವಾಮಿಗಳ ಮೇಲೆ ಕೈಮಾಡಿದರು

ಸುಳ್ಯದ ಬಳಿ ಕೊಜ್ಯಾಡಿ ಎಂಬಲ್ಲಿ ವಾಸಮಾಡಿಕೊಂಡಿರುವ ಸ್ವಾಮಿಯೊಬ್ಬರ ಮೇಲೆ ಕೆಲವರು ದಾಳಿಯಿಟ್ಟು ನೋಯಿಸಿ ಪರಾರಿಯಾದ ವಾರ್ತೆಯಿದೆ. ಗಲಭೆಯ ಉದ್ದೇಶವೇನೆಂಬುದು ತಿಳಿದುದಿಲ್ಲ.

## ವರ್ಗಾವರ್ಗಿ

ಸಕಲೇಶಪುರದಲ್ಲಿ ಅಸಿಸ್ಟಾಂಟ್ ಕಮಿಷನರರಾಗಿದ್ದ ಶ್ರೀ| ಬಿ. ರಾಮರಾವ್‌ರವರನ್ನು ಮಂಗಳೂರು ಜಿಲ್ಲಾ ಡಿಪ್ಟಿ ಕಮಿಷನರರ ಪರ್ಸನಲ್ ಅಸಿಸ್ಟಾಂಟ್ ಆಗಿ ವರ್ಗಾಯಿಸಲಾಗಿದೆ ಎಂದು ತಿಳಿಯಲಾಗಿದೆ.

## ಕಾರು ಕಳವು

ದಕ್ಷಿಣ ಭಾರತದ ಪ್ರಖ್ಯಾತ ಸಿನೇಮಾ ನಟ ಆರ್. ಗಣೇಶನರ ಮಗಳು ಕುಮಾರಿ ಕಮಲಾನಂದ ರೇವತಿಯವರು ಮಣಿಪಾಲ ಕಸ್ತೂರಬಾ ಮೆಡಿಕಲ್ ಕೊಲೆಜಿನಲ್ಲಿ ಕಲಿಯುತ್ತಿದ್ದು, ಅವರ ಕಾರು ಕಳೆದ ತಾ. 24ರಂದು ರಾತ್ರಿ ಅವರ ಮನೆಯಿಂದ ಕಳವಾಗಿದ್ದು, ಮರುದಿನ ಪ್ರಾತಃಕಾಲ ಉಡ್ಪಿಯಿಂದ 11 ಮೈಲು ದೂರದಲ್ಲಿ ರಸ್ತೆಯ ಬದಿಯಲ್ಲಿ ದುರವಸ್ಥೆಯಲ್ಲಿದ್ದುದು ಕಂಡು ಬಂದಿದೆಯೆಂದು ವರದಿಯಾಗಿದೆ. ಶ್ರೀ| ಗಣೇಶನರ ಕಾರ್ಯದರ್ಶಿ ಶ್ರೀ| ವಿ. ಮಹಾಲಿಂಗಮರು ಈಗ ಮಣಿಪಾಲದಲ್ಲಿದ್ದು ಕಳವಿನ ಕುರಿತು ಪೋಲೀಸರಿಗೆ ದೂರನ್ನಿತ್ತಿರುವರು. ಅನ್ವೇಷಣೆಯು ಮುಂದುವರಿಯುತ್ತಿದೆ.

## ಪುತ್ತೂರು ಕರ್ನಾಟಕ ಸಂಘ

ಪುತ್ತೂರು ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 20ರಂದು ಸಂಜೆ ಸಹಕಾರಿ ಟೌನ್ ಬೇಂಕಿನ ಮಹಡಿಯಲ್ಲಿ ಏರ್ಪಡಿಸಲಾಗಿದ್ದ ಸಭೆಯಲ್ಲಿ ಧಿಲ್ಲಿಯ ಯೋಜನಾ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ| ಎಚ್. ವೈ ಶಾರದಾ ಪ್ರಸಾದರು ಪತ್ರಿಕೆಗಳ ಆತ್ಮಶಕ್ತಿ ಬೆಳೆಯಬೇಕಾದ ಅವಶ್ಯಕತೆಯನ್ನು ವಿವರಿಸಿ ಭಾಷಣವಿತ್ತರು. ಶ್ರೀ| ಕೆ. ಶಿವರಾಮ ಕಾರಂತರು ಭಾಷಣಕರ್ತರ ಪರಿಚಯ ಮಾಡಿಕೊಟ್ಟು, ಶ್ರೀ| ಎ. ಪಿ. ಸುಬ್ಬಯ್ಯನವರು ಕೊನೆಯಲ್ಲಿ ವಂದನೆಗಳನ್ನು ಸಲ್ಲಿಸಿದರು.

## ಅಂತರ್ಕಾಲೆಜು ಅಣಕ ಪಾರ್ಲಿಮೆಂಟ್

ಮಂಗಳೂರು ಸೈಂಟ್ ಎಲೋಸಿಯಸ್ ಕೊಲೇಜ್ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕೊಲೆಜಿನ ಸಭಾಭವನದಲ್ಲಿ ಕಳೆದ ತಾ. 26ರಂದು ಬೆಳಿಗ್ಗೆ ಅಣಕ ಪಾರ್ಲಿಮೆಂಟ್ ಅಧಿವೇಶನವು ಜರಗಿತು. ಸೈಂಟ್ ಎನ್ಸ್ ಟ್ರೈನಿಂಗ್ ಕೊಲೇಜ್, ಗವರ್ನಮೆಂಟ್ ಟ್ರೈನಿಂಗ್ ಕೊಲೇಜ್, ಸೈಂಟ್ ಎಗ್ನೇಸ್ ಕೂಲೇಜ್, ಗವರ್ನಮೆಂಟ್ ಕೊಲೇಜ್, ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕೊಲೇಜ್ ಮತ್ತು ಸೈಂಟ್ ಎಲೋಸಿಯಸ್ ಕೊಲೇಜುಗಳು ಭಾಗವಹಿಸಿದ್ದುವು. ಕಸ್ತೂರಬಾ ಮೆಡಿಕಲ್ ಕೊಲೇಜಿನ ಪ್ರಿನ್ಸಿಪಾಲ್ ಡಾ| ಜೆ. ಡಿ. ವೆಲಿಯತ್‌ರವರು ಸಮಾರಂಭವನ್ನು ಉದ್ಘಾಟಿಸಿದರು.

## ದಕ್ಷಿಣ ರೈಲ್ವೇ ನೌಕರರ ಸಂಘ

ದಕ್ಷಿಣ ರೈಲ್ವೇ ಮಂಗಳೂರು ವಿಭಾಗದ ನೌಕರರ ಸಂಘದ ವಾರ್ಷಿಕ ಮಹಾಸಭೆಯು ತಾ. 26ರಂದು ಶ್ರೀ| ಪಿ. ಎ. ಕೆ. ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಶ್ರೀಗಳಾದ ಪಿ. ಪಿ. ಕೆ. ನಂಬಿಯಾರರವರು ಅಧ್ಯಕ್ಷರಾಗಿಯೂ, ಎ. ಅಯ್ಯಪ್ಪನ್ ಕಾರ್ಯದರ್ಶಿಯಾಗಿಯೂ, ಟಿ ಪಿ. ಬಾಲಚಂದನ್ ನಾಯರ್, ಕೆ ನಾರಾಯಣನ್ ಮತ್ತು ಬಾಲಗೋಪಾಲ ಪಣಿಕ್ಕರ್ ರವರು ಉಪ ಕಾರ್ಯದರ್ಶಿಗಳಾಗಿಯೂ ಶ್ರೀ| ಆರ್. ಕಣ್ಣನ್ ಕೋಶಾಧಿಕಾರಿಯಾಗಿಯೂ ಅವಿರೋಧ ಆಯ್ಕೆಗೊಂಡರು.

## ಸಂಯುಕ್ತ ಸಭೆ

ಅತ್ತಾವರದ ಫ್ರೆಂಡ್ಸ್ ಆರ್ಟ್ಸ್ ಸರ್ಕಲ್, ಜೊಲಿ ಬ್ರದರ್ಸ್ ಮತ್ತು ವೀರ ಮಾರುತಿ ಟೀಮ್ ಇವುಗಳ ಸಂಯುಕ್ತ ಸಭೆಯೊಂದು ಕಳೆದ ತಾ. 26ರಂದು ಅತ್ತಾವರದಲ್ಲಿ ಶ್ರೀ| ಸದಾಶಿವ ಅಮಿನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಮೂರು ಸಂಘಗಳನ್ನು ಸಂಯೋಜಿಸಿ ಒಂದೇ ಸಂಸ್ಥೆಯಾಗಿ ಮುಂದುವರಿಸಬೇಕೆಂದು ತೀರ್ಮಾನಿಸಲಾಯಿತಲ್ಲದೆ, ಈ ಸಂಯೋಜಿತ ಸಂಸ್ಥೆಗೆ ಅತ್ತಾವರ ಫ್ರೆಂಡ್ಸ್ ಸರ್ಕಲ್ ಎಂದು ನಾಮಕರಣ ಮಾಡಲಾಯಿತು. ಸಂಘದ ಕಾರ್ಯಕಾರಿ ಸಮಿತಿಗೆ ಈ ಕೆಳಗಿನವರು ಆರಿಸಲ್ಪಟ್ಟರು: ಶ್ರೀಗಳಾದ ಎ. ರವೀಂದ್ರನಾಥ್-ಅಧ್ಯಕ್ಷ, ಎ. ಸದಾಶಿವ ಅಮಿನ್-ಪ್ರಧಾನ ಕಾರ್ಯದರ್ಶಿ, ಸತೀಶ ಕುಮಾರ್ ಮತ್ತು ಚಂದ್ರಹಾಸ-ಜೊತೆ ಕಾರ್ಯದರ್ಶಿಗಳು, ವೇಣುಗೋಪಾಲ್-ಕೋಶಾ

ಧಿಕಾರಿ, ವೆಂಕಟ್ರಮಣ, ಗೋಪಾಲ ಕೃಷ್ಣ, ಮಾಧವ ನಂಬಿಯಾರ್, ಶಶಿಕಾಂತ, ಎ. ದೇವದಾಸ್, ಗಣೇಶ ಆವಿನಾಸ್, ವಿದ್ಯಾಧರ, ಚಂದ್ರಹಾಸ- ಸದಸ್ಯರು.

## ನಗರಸಭಾ ಚುನಾವಣಾ ಸಿದ್ಧತೆ

ಮಂಗಳೂರು ಮತ್ತು ಉಡುಪಿ ನಗರ ಸಭೆಗಳಿಗೆ ಮುಂದಿನ ಅಕ್ಟೋಬರ್ ಮಧ್ಯದಲ್ಲಿ ನಡೆಯಲಿರುವ ಚುನಾವಣೆಗಳಿಗೆ ಬೇರೆಬೇರೆ ಪಕ್ಷಗಳ ಕಡೆಯಿಂದ ಭರದಿಂದ ಸಿದ್ಧತೆ ನಡೆಯುತ್ತಿದೆ. ನಗರದ ಜನತೆಗೆಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವ ಧೋರಣೆಯ ತಳಹದಿಯ ಮೇಲೆ ಮುಂಬರುವ ಮಂಗಳೂರು ಹಾಗೂ ಉಡುಪಿ ನಗರಸಭಾ ಚುನಾವಣೆಗಳಲ್ಲಿ ಎಲ್ಲರೂ ಒಟ್ಟುಗೂಡಿ 'ಐಕ್ಯರಂಗ'ವೊಂದನ್ನು ಸ್ಥಾಪಿಸಲು ದ. ಕ. ಜಿಲ್ಲಾ ಕಮ್ಯೂನಿಸ್ಟ್ ಪಕ್ಷವು ಕೊಂಗ್ರೆಸ್ ಹಾಗೂ ಸುಧಾರಕ ಮನೋವೃತ್ತಿಯ ವ್ಯಕ್ತಿಗಳಿಗೆ ಕರೆಯುತ್ತಿದೆ. ಈ ಉದ್ದೇಶದ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಶ್ರೀಗಳಾದ ಎಂ. ಎಚ್. ಕೃಷ್ಣಪ್ಪ, ಎ. ಕೃಷ್ಣ ಶೆಟ್ಟಿ, ಎಂ. ಎಲ್. ಎ., ಶಾಂತಾರಾಮ ಪೈ, ರಾಮಚಂದ್ರ ರಾವ್ ಮತ್ತು ಕೆ. ಮೋನಪ್ಪ ಶೆಟ್ಟರನ್ನೊಳಗೊಂಡ ಐದು ಮಂದಿಯ ಉಪಸಮಿತಿಯೊಂದನ್ನು ರಚಿಸಲಾಗಿದೆ.

ಜಿಲ್ಲಾ ಕೊಂಗ್ರೆಸ್ಸಿನವತಿಯಿಂದ ಶ್ರೀ| ಮುಣೇಲ ಶ್ರೀನಿವಾಸ ನಾಯಕ್ ಎಂ. ಎಲ್. ಎ.ರವರ ನೇತೃತ್ವದಲ್ಲಿ ದ. ಕ. ಜಿಲ್ಲಾ ಕೊಂಗ್ರೆಸ್ ಪಕ್ಷವು ಚುನಾವಣಾ ಸಮಿತಿಯೊಂದನ್ನು ರಚಿಸಿದೆ, ಎರಡೂ ನಗರಸಭೆಗಳಲ್ಲಿಯೂ ಪಕ್ಷದ ತಳಹದಿಯಲ್ಲಿ ಚುನಾವಣೆಗೆ ಸ್ಪರ್ಧಿಸಲು ಕೊಂಗ್ರೆಸ್ಸು ನಿಶ್ಚಯಿಸಿದೆ ಮತ್ತು ಅಗತ್ಯ ಕಂಡಲ್ಲಿ ಅದು ಸ್ವತಂತ್ರ (ಪಕ್ಷ ರಹಿತರು) ರನ್ನು ಬೆಂಬಲಿಸುವುದೆಂದು ಹೇಳಲಾಗಿದೆ. 'ಅಭ್ಯರ್ಥಿಗಳಯಾದಿ ಇನ್ನೂ ಸಂಪೂರ್ಣವಾಗಿಲ್ಲ; ಇನ್ನು ಕೆಲವೇ ದಿನಗಳಲ್ಲಿ ಅದು ಕೊನೆಗೊಳ್ಳಬಹುದು' ಎಂದು ಜಿಲ್ಲಾ ಕೊಂಗ್ರೆಸ್ಸಿನ ಸಂಘಟನಾ ಕಾರ್ಯದರ್ಶಿ ಶ್ರೀ| ಬಿ. ನಾರಾಯಣ ನ್ಯಾಕರು ತಿಳಿಸಿದ್ದಾರೆ.

ಭಾರತೀಯ ಜನಸಂಘದ ಮಂಗಳೂರು ಕಂಬ್ಳ ವಾರ್ಡಿನ ಸದಸ್ಯರ ಸಭೆಯು ತಾ. 26ರಂದು ಶ್ರೀ| ಯು. ಸಖಾರಾಮ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ, ಕಂಬ್ಳ ವಾರ್ಡಿನಿಂದ ಮುಂಬರುವ ನಗರಸಭಾ ಚುನಾವಣೆಯಲ್ಲಿ ಪಕ್ಷದ ವತಿಯಿಂದ ಅಧಿಕೃತವಾಗಿ ಸ್ಪರ್ಧಿಸಬೇಕೆಂದು ಸಭೆಯಲ್ಲಿ ನಿರ್ಧಾರವಾಗಿದೆ.

## ಶಾಲಾ ಕಟ್ಟಡದ ಉದ್ಘಾಟನೆ

ವೀರಮಂಗಲ ಸರಕಾರೀ ಪ್ರಾಥಮಿಕ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ತಾಲೂಕು ಬೋರ್ಡು ಸದಸ್ಯ ಶ್ರೀ| ಬಿ. ಕಿಟ್ಟಣ್ಣ ರೈಗಳ ಅಧ್ಯಕ್ಷತೆಯಲ್ಲಿ ಪುತ್ತೂರು ತಾಲೂಕು ಬೋರ್ಡು ಅಧ್ಯಕ್ಷ ಶ್ರೀ| ಸುಬ್ರಹ್ಮಣ್ಯ ಗೌಡರಿಂದ ನೆರವೇರಿತು.

## ಶಿಕ್ಷಕರ ದಿನ

ಸಪ್ಟೆಂಬರ್ ತಾ. 5ರಂದು ಜಿಲ್ಲೆಯಾದ್ಯಂತ 'ಶಿಕ್ಷಕರ ದಿನ' ಆಚರಿಸಲಾಗುವುದೆಂದು ಜಿಲ್ಲಾ ವಿದ್ಯಾಧಿಕಾರಿಗಳ ಕಚೇರಿಯಿಂದ ಹೊರಟ ಒಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಶಿಕ್ಷಕರ ಕಲ್ಯಾಣ ಸಾಧನೆಯ ದಿಸೆಯಲ್ಲಿ ಜನತೆಗಿರುವ ಜವಾಬ್ದಾರಿಯನ್ನು ತಿಳಿಯಪಡಿಸುವುದು ಹಾಗೂ 'ನೆಶನಲ್ ಟೀಚರ್ಸ್ ವೆಲ್ಫೇರ್ ಫಂಡಿ'ಗೆ ವಂತಿಗೆ ಕೂಡಿಸಲು ಸಾಮೂಹಿಕ ಕಾರ್ಯಕ್ರಮ ಪ್ರಚೋದಿಸುವುದೇ ಈ ಆಚರಣೆಯ ಉದ್ದೇಶವೆನ್ನಲಾಗಿದೆ.



## ನಾಟಕ ಪ್ರದರ್ಶನ

ಮಂಗಳೂರು ಶ್ರೀ ಸತ್ಯ ಸಾಯಿ ಬಾಬಾ ನಾಟಕ ಸಭಾದವರ ಆಶ್ರಯದಲ್ಲಿ 'ಭ್ರಾತೃ ಬಂಧನ'ವೆಂಬ ನಾಟಕವು ಕಳೆದ ತಾ. 26ರಂದು ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ, ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

## ಶ್ರೀ| ಇನ್ನೋಳಿ ವಾಸುದೇವ ಪೈಯವರ ಆಕಸ್ಮಿಕ ನಿಧನ

ಬಂಟವಾಳ ಮಂಡಲ ಕೊಂಗ್ರೆಸ್ ಕಾರ್ಯದರ್ಶಿಗಳಾಗಿದ್ದ ಶ್ರೀ| ಇನ್ನೋಳಿ ವಾಸುದೇವ ಪೈಯವರು ತಾ.29ರಂದು, ಬಂಟವಾಳದಲ್ಲಿ ಹೃದಯಸ್ತಂಭನದಿಂದ ನಿಧನಹೊಂದಿದರು. ಶ್ರೀಯುತರು, ಹಲವು ವರ್ಷಗಳ ಹಿಂದೆ ಕೆನರಾ ಹೈಸ್ಕೂಲಿನ ಅಧ್ಯಾಪಕರಾಗಿದ್ದ ಶ್ರೀ| ಇನ್ನೋಳಿ ವೆಂಕಟೇಶ ಪೈ (ದಿವಂಗತ) ರವರ ಪುತ್ರ. ಶಾಲಾ ಶಿಕ್ಷಣ ಮುಗಿಸಿದ ನಂತರ ಕೆಲವು ವರ್ಷ ಮುಂಬಯಿಯಲ್ಲಿದ್ದು, ಕಳೆದ 10-12 ವರ್ಷಗಳಿಂದ ಬಂಟವಾಳಕ್ಕೆ ಬಂದು ನೆಲಸಿದ್ದರು. ಮೃತರ ವಯಸ್ಸು ಸುಮಾರು 48.

## ಶ್ರೀ| ಚನ್ನಪ್ಪ ಉತ್ತಂಗಿಯವರ ನಿಧನ

ಸುಪ್ರಸಿದ್ಧ ಸಾಹಿತಿಗಳಾದ ಶ್ರೀ| ಚನ್ನಪ್ಪ ಉತ್ತಂಗಿಯವರು ಧಾರವಾಡದಲ್ಲಿ ತಮ್ಮ ಮನೆಯಲ್ಲಿ, ತಾ. 28ರಂದು ನಿಧನಹೊಂದಿದರು. ಶ್ರೀ| ಉತ್ತಂಗಿಯವರಿಗೆ 81 ವರುಷ ತುಂಬಿತ್ತು.

ಶ್ರೀ| ಉತ್ತಂಗಿಯವರು 1940ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದರು.

ಸರ್ವಜ್ಞವಚನಗಳನ್ನು ಸಂಕಲಿಸಿ, ಸಂಪಾದಿಸಿ ಪ್ರಕಟಿಸಿದ್ದರು.

## ವಾರ್ತಾ ಸಾರ

ಇಂಗ್ಲಿಷನ್ನು ಮುಂದುವರಿಸುವುದು ಯೋಗ್ಯವೆಂದು, ಮುಂಬಯಿಯ ಗವರ್ನರ ಡಾ| ಪಿ ಸುಬ್ಬರಾಯನ್‌ರವರು ಕಳೆದವಾರ ಮುಂಬಯಿ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಅಭಿಪ್ರಾಯಪಟ್ಟರು.

ಮುಂಬಯಿಯ ಬಸ್ಸುಗಳು ಆನಿಷ ಐದು ನಯೆ ಪೈಸೆದರವನ್ನು 1·5 ಕಿಲೋಮೀಟರ್ ಮಿತಿಗೆ ನಿರ್ಣಯಿಸುವುದೊಳಿತೆಂದು ILO ಪ್ರೊಡಕ್ಟಿವಿಟಿ ಮಿಶ್ಯನ್ ರವರು, ತಮ್ಮ ವರದಿಯಲ್ಲಿ ಶಿಫಾರಸು ಮಾಡಿರುವರು.

ರಾಮನಾಡು ಜಿಲ್ಲೆಯ ಮಿಲಾಗನೂರು ಎಂಬ ಹಳ್ಳಿಯ ಎಲ್ಲ ನಿವಾಸಿಗಳು, ತಾ. 27ನೇ ದಿನ, ತಮ್ಮ ಹಳ್ಳಿಯ ಕೆರೆಗೆ ಕಾಲುವೆ ನೀರನ್ನು ಬಿಡಬೇಕು ಎಂಬ ಕೇಳಿಕೆಯ ಕಡೆಗೆ ಮದರಾಸು ಸರಕಾರದ ಲಕ್ಷ್ಯ ಸೆಳೆವ ಸಲುವಾಗಿ, ಒಂದು ದಿನದ ಉಪವಾಸವ್ರತ ಆಚರಿಸಿದರು. ಇಡೀ ಹಳ್ಳಿಯೊಂದು ಈ ರೀತಿ ಅನ್ನಸತ್ಯಾಗ್ರಹ ಕೈಕೊಳ್ಳುವುದು ಇದೇ ಮೊದಲನೆಯ ಸಲವೆನ್ನಬಹುದು.

ಮದರಾಸಿನಲ್ಲಿ, ದ್ರಾವಿಡ ಮುನ್ನೇತ್ರ ಕಳ್ಗಂದವರು ಅವಶ್ಯಕ ಸಾಮಗ್ರಿಗಳ ಧಾರಣೆ ಏರಿಕೆಯ ವಿರುದ್ಧ ಕಳೆದ ತಿಂಗಳಲ್ಲಿ ಸೆಕ್ರಟರಿಯೇಟಿನ ಮುಂದೆ ನಡೆಸಿದ ಪಿಕೆಟಿಂಗ್—(ಸರಕಾರೀ ನೌಕರರನ್ನು ಆತಂಕಪಡಿಸಿದ ಅಪರಾಧ)ಗಾಗಿ ನೂರಾರು ದಸ್ತಗಿರಿಗಳಾಗಿ, ಈ ವರೆಗೆ ಸುಮಾರು 570 ಮಂದಿಗೆ ಶಿಕ್ಷೆ ವಿಧಿಸಲ್ಪಟ್ಟಿದೆ. ಈ ಚಳವಳದಲ್ಲಿ ಭಾಗವಹಿಸಿದ ಮದರಾಸು ಮೇಯರರ ಶ್ರೀ| ಜಿ. ಕುಜೇಲರವರಿಗೂ, ಡೆಪ್ಯುಟಿ ಮೇಯರ ಶ್ರೀ| ಎಮ್. ವೇದಾಚಲಂರವರಿಗೂ, ಒಬ್ಬ ಎಮ್ ಎಲ್. ಎ. ಹಾಗು ಒಬ್ಬ ಲೋಕಸಭಾ ಸದಸ್ಯರಿಗೂ ತಲಾ ಮೂರು ತಿಂಗಳ ಸಾದಾ ಸಜೆಯನು, ಮದರಾಸಿನ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ವಿಧಿಸಿರುವರು.

ಸಿನೆಮಾ ಪೋಸ್ಟರುಗಳಲ್ಲಿ ಕೆಲವು ಅಶ್ಲೀಲವೆನಿಸುವಂತಿರಬಹುದಾದ ಕಾರಣ, ಇವುಗಳ ಬಗ್ಗೆ ಕೂಡಾ ನಿರ್ಬಂಧಿಗಳನ್ನೂ (ಸೆನ್ಸರ್ ಮಾಡುವ ಕ್ರಮವನ್ನು) ಕೇಂದ್ರ ಸರಕಾರವು ಪರ್ಯಾಲೋಚಿಸುತ್ತಿದೆ.

## NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 219/1961.
R. I. A. 328/1962.

ವಾದಿ—ನಾರಾಯಣ ಕಾರಂತ.

ಪ್ರತಿವಾದಿರು—1. ರುಸಾಂಯೊ ಡಾಲ್ಮೇಡ, 2. ರಜಿನಿ ವಲ್ದೇರಳು. 3. ಮರ್ಶಿನ್ ಡಾಲ್ಮೇಡ. 4. ಎಜಿಯಫ್ ಡಾಲ್ಮೇಡ, 5. ಉರ್ಬಾನ್ ಡಾಲ್ಮೇದ. 6. ಎಲಿಜ್ ಡಾಲ್ಮೇದ ಬ್ಯಾ. 7. ಆಗ್ನಿಸ್ ಡಾಲ್ಮೇದ ಬ್ಯಾ. 8. ಮಡ್ತಿನ್ ಡಾಲ್ಮೇದ ಬ್ಯಾ. 9. ಸೆಲಿನ್ ಡಾಲ್ಮೇದ ಬ್ಯಾ. 10. ಲಂಜಿನ್ ಡಾಲ್ಮೇದ ಬ್ಯಾ.

ಕುಂದಾಪುರ ತಾಲ್ಲೂಕು ತ್ರಾಸಿ ಗ್ರಾಮದ ಅನಗೋಡದಲ್ಲಿರುವ ಎಡ್ವರ್ಡ್ ಡಾಲ್ಮೇದರ ಹೆಂಡ್ತಿ ರಜಿನಿ ವಲ್ದೇರಳು 1, ಎಡ್ವರ್ಡ್ ಡಾಲ್ಮೇದರ ಮಕ್ಕಳು ಮರ್ಶಿನ್ ಡಾಲ್ಮೇದ 1, ಎಜಿಯಫ್ ಡಾಲ್ಮೇದ 1, ಉರ್ಬಾನ್ ಡಾಲ್ಮೇದ 1, ಎಲಿಜ್ ಡಾಲ್ಮೇದ ಬ್ಯಾ 1, ಮರ್ಶಿನ್ ಡಾಲ್ಮೇದ ಬ್ಯಾ 1, ಸೆಲಿನ್ ಡಾಲ್ಮೇದ ಬ್ಯಾ 1, ಲಂಜಿನ್ ಡಾಲ್ಮೇದ ಬ್ಯಾ 1 ಕೂಡಾ ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ:

ಸದ್ರಿ ವ್ಯವಹರಣೆಯಲ್ಲಿ ವಾದಿಯು ಪ್ರತಿವಾದಿಯಿಂದ ಬರತಕ್ಕ ಮೂಲಗೇಣಿ ಬಾಕಿ ಬರಮಾಡಿಕೊಳ್ಳುವರೆ ದಾಖ್ಲು ಮಾಡಿದ ದಾವೆಯಲ್ಲಿ 2ರಿಂದ 10ನೇ ವರೆಗಿನ ಪ್ರತಿವಾದಿರನ್ನು ಸಪ್ಲಮೆಂಟು ಪ್ರತಿವಾದಿರನ್ನಾಗಿ ಆಕ್ಷಿಯಲ್ಲಿ ಸೇರ್ಸಿಕೊಳ್ಳಬೇಕೆಂತ ವಾದಿಯು ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 4—9—62ಕ್ಕೆ ಮೇಲಿನ ಕೋರ್ಟಿನಲ್ಲಿ ತಕ್ಕಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಹಿರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿಯದೆ.

N. S. Parameshwariah,
Advocate for Plff.

Date 28—8—62,
Coondapoor.

"ಧನಾಢ್ಯ ಮಿತರಾಂಗನಾರತಮನೇಕ
ಸೌಖ್ಯಂ ಭಾವೇ"
(ಫಲದೀಪಿಕಾ)

ಏಕಾದಶದಲ್ಲಿ ಶುಕ್ರನಿದ್ದರೆ ಹಣದಿಂದ ಕೂಡಿದವನೂ, ಅನ್ಯಸ್ತ್ರೀರತನೂ, ಅನೇಕ ಸೌಖ್ಯಗಳಿಂದ ಕೂಡಿದವನೂ ಆಗುವನು.

ಸುಸೌಖ್ಯ ಬಾಹುಲಂ
ಸುವಿತ್ತ ವಾಹನಾದಿ ಬಾಹುಲವ್ |
ಸುಭೃತ್ಯ ಬಾಹುಲಂ
ಕುಟುಂಬ ಬಾಹುಲಂ ನರಸ್ಯ ಚ |
ಸುಭಾಗ್ಯ ಬಾಹುಲಂ
ಸುಭೋಗ ಭೂಷಣಾದಿ
ಬಾಹುಲವ್ |
ಸುಲಾಭ ಸಿದ್ಧಿಂ ನೃಪಾತ್ಯ-
ರೋತಿ ಲಾಭಗೇ ಭೃಗೌ ||

ಉತ್ತರೀತಿಯ ಬಹುಸುಖ, ಬಹು ಧನ ವಾಹನ ಪ್ರಾಪ್ತಿ, ತುಂಬಾ ಕೆಲಸಗಾರರಿಂದ ಕೂಡಿರುವಿಕೆ, ದೊಡ್ಡ ಕುಟುಂಬವಾಗುವಿಕೆ, ಅತಿ ಭಾಗ್ಯ, ಬಹುಭೋಗ ಭೂಷಣ, ರಾಜನಿಂದ ಒಳ್ಳೆಯ ಲಾಭಸಿದ್ಧಿಗಳನ್ನು ಏಕಾದಶದ ಶುಕ್ರನು ಕೊಡುವನು.

ಲೇಖಾಂಕ ೮೫೪.

# ಏಕಾದಶದ ಶುಕ್ರನ ಫಲ—೩೭

## (ಎಂ. ಸುಬ್ರಾಯನ್)

ತುಂಬಾ ಗೆಳೆಯರಿಂದಲೂ, ಅನೇಕ ಪುತ್ರರಿಂದಲೂ, ಸತ್ಸಂಗದಿಂದಲೂ ಕೂಡಿದವನೂ, ಬಲಶಾಲಿಯೂ, ಪಾಲುಗಾರರೂ ವಿರೋಧಿಗಳೂ ಇಲ್ಲದವನೂ, ಸರ್ವಜನಪ್ರಿಯನೂ, ಗೀತ ನೃತ್ಯಗಳಿಂದ ಸಮಯವನ್ನು ಕಳೆಯುವವನೂ ಆಗುವನು ಎಂದು ಕೆಲವರ ಮತ. ವಿದ್ವಾಂಸನೂ, ಶ್ರೀಮಂತತನಗೊಳ್ಳುವವನೂ, ಭೂಸಂಪತ್ತು ವಾಹನಗಳುಳ್ಳವನೂ ಆಗುವನು ಎಂದೂ ಇನ್ನು ಕೆಲವರ ಮತ.

ಪಾಶ್ಚಾತ್ಯರು ಒಳ್ಳೆಯ ಗೆಳೆಯರನ್ನು ಹೊಂದುವರು. ಅವರಿಂದ ಮುಂದಕ್ಕೆ ಏಳಿಗೆಗೆ ಬರುವನು. ವ್ಯಾಪಾರದಿಂದ ತುಂಬಾ ಹಣ ಬರುತ್ತದೆ. ವಿವಾಹದಿಂದ ಧನಲಾಭವಾಗುವುದು. ತುಂಬಾ ಮಕ್ಕಳಾಗುವರು. ಗೆಳೆಯರು ಬಹಳ ಇರುವರು. ನಿರ್ಬಲಿಯೂ ದೂಷಿತನೂ ಆದ ಶುಕ್ರನು ಅನಿಷ್ಟ ಫಲವನ್ನು ಕೊಡುವನು. ಕುಜ, ಶನಿ, ಹರ್ಷಲ್ ಮತ್ತು ನೆಪ್ಚ್ಯೂನ್‌ಗಳ ಅಶುಭ ಸಂಬಂಧ ಈ ಶುಕ್ರನಿಗೆ ಒಳ್ಳೆಯದಲ್ಲ, ರವಿಯ ಶುಭ ಯೋಗವಾದ್ದರೆ, ಹೆಂಡತಿಯ ಕುಟುಂಬೀಯರಿಂದಲೂ, ಚಂದ್ರನು ಶುಭ ಸಂಬಂಧವಾದರೆ ವಿನೋದ, ಕ್ರೀಡೆ, ಕೂಟಗಳಿಂದಲೂ, ಕುಜನ ಶುಭ ಸಂಬಂಧವಾದರೆ ಬಹುಪ್ರೇಮ ಮತ್ತು ಲೋಕ ಸಂಬಂಧದಿಂದಲೂ, ಬುಧನ ಶುಭ ಯೋಗವಾದರೆ ಉತ್ತಮ ಮನುಷ್ಯರು ಹಾಗೂ ಚತುರರು ಇಲ್ಲವೇ ಮೋಸಗಾರರಿಂದಲೂ, ಗುರುವಿನ ಶುಭಯೋಗವಾದರೆ ಗೆಳೆಯರಿಂದಲೂ ಜ್ಞಾನಿಗಳಿಂದಲೂ ಶನಿಯ ಸಂಬಂಧವಾದರೆ ದುಃಖಮಯ ಜೀವನದಿಂದಲೂ ಕೂಡಿರುವಿಕೆಯು ಆಗುವುದು ಎಂದು ಹೇಳಿರುವರು.

ಬಹುಧನವಾನ್, ವಿದ್ವಾನ್
ಭೂಮಿಲಾಭವಾನ್ ದಯಾವಾನ್
ಶುಭಯುತೇ ಅನೇಕ ವಾಹನ ಯೋಗಃ
ಕನಕ ಧನ ಸಮೃದ್ಧಂ ದಿವ್ಯ ಕಾಯಂ
ಸುಕಾಂತಿರ್ವ
ಪಾಪಯುತೇ ಪಾಪಮೂಲಾತ್
ಧನಲಾಭಃ
ಶುಭಯುತೇ ಶುಭಮೂಲಾತ್
ನೀಚಕ್ಷೇತ್ರೇ ಪಾಪರಂಧ್ರೇಶಾದಿಯೋಗೇ
ಲಾಭಹೀನಃ || (ಭೃಗುಸೂತ್ರ)

ವಿದ್ವಾಂಸನೂ, ಬಹುಧನಿಕನೂ, ಭೂಸಂಪತ್ತನ್ನು ಹೊಂದುವವನೂ, ದಯಾವಂತನೂ ಆಗುವನು. ಶುಭಯುತನಾಗಿದ್ದರೆ, ಅನೇಕ ವಾಹನಯೋಗವಾಗುವುದು. ಸ್ವರ್ಣ ಧನಸಮೃದ್ಧಿ, ದಿವ್ಯ ಶರೀರ ಕಾಂತಿಗಳುಂಟಾಗುವವು. ಪಾಪಯುತನಾಗಿದ್ದರೆ ಪಾಪಕರ್ಮದಿಂದ ಧನಲಾಭವಾಗುವುದು. ಶುಭಯುತನಾಗಿದ್ದರೆ ಒಳ್ಳೆಯ ಕೆಲಸಗಳಿಂದ ಧನಲಾಭವಾಗುವುದು. ನೀಚ ಕ್ಷೇತ್ರದಲ್ಲಿದ್ದು ಪಾಪನೂ ಅಷ್ಟಮಾಧಿಪತಿ ಮೊದಲಾದವರ ಯೋಗಯುಕ್ತನಾದರೆ ಲಾಭಹೀನನೂ ಆಗುವನು.

ಪುರುಷರಾಶಿಯಲ್ಲಿದ್ದು ಅಶುಭ ಸಂಪರ್ಕವಾದರೆ ಅನಿಷ್ಟ ಫಲ ಕಾಣುವುದು. ನಮ್ಮ ಪ್ರಾಚೀನರು ಏಕಾದಶ ಭಾವದ ಗ್ರಹರಿಗೆ ಶುಭಫಲವನ್ನೇ ಹೇಳಿರುವರು. ಪುರುಷರಾಶಿಯ ಏಕಾದಶದ ಶುಕ್ರನು ಪುತ್ರಸಂತಾನ ಅತಿ ಕಡಮೆ ಕೊಡುವನು. ಹೆಣ್ಣು ಮಕ್ಕಳು ಅಧಿಕವಾಗಿರುವರು. ಮೇಷ, ಸಿಂಹ, ಧನುಗಳ ಏಕಾದಶದ ಶುಕ್ರನು ಪುತ್ರಸಂತಾನವನ್ನು ಕೊಡುವುದಿಲ್ಲ. ಪುತ್ರಸಂತಾನವಾದರೂ ಉಳಿಯುವುದಿಲ್ಲ. ಹುಡುಗಿಯರೇ ಅಧಿಕವಾಗಿರುವರು. ಹಿರಿಯ ಅಣ್ಣನಿಂದ ಸುಖಲಾಭವಿರುವುದಿಲ್ಲ, ಪೋಷಿಸಬೇಕಾಗುತ್ತದೆ. ತುಂಬಾ ಹಣ ಬರುತ್ತದೆ. ಖರ್ಚೂ ಬಹಳವಾಗಿರುವುದು. ವ್ಯಾಪಾರ ಮತ್ತು ನೌಕರಿಗಳಲ್ಲಿ ವ್ಯವಸ್ಥಿತ ರೀತಿಯಿಂದಿರುವನು. ಸ್ತ್ರೀರಾಶಿಯ ಶುಕ್ರನು ಉತ್ತಮ ನಡತೆಯನ್ನು ಕೊಡುವುದಿಲ್ಲ. ಹಣದ ದೃಷ್ಟಿಯೇ ಇರುವುದು. ಜನರು ಗೌರವಿಸರು. ಅಪವಾದಗಳು ಕಾಣುವವು. ವ್ಯಭಿಚಾರ ನಡೆಸುವನು. ಕರ್ಕಟಕ ವೃಶ್ಚಿಕ ಮೀನಗಳ ಶುಕ್ರನು ಸಂತಾನವನ್ನು ಕೊಡುವುದಿಲ್ಲ. ಪುತ್ರಸಂತತಿಗೆ ದೋಷವನ್ನು ಕೊಡುವನು ಎರಡುಮದುವೆಯಾಗುವುದೂ ಇದೆ. 22ಯಾ 32ನೆ ವರುಷಗಳಿಂದ ಭಾಗ್ಯೋದಯವಾಗುತ್ತದೆ. ನಡತೆ ಚೆನ್ನಾಗಿರುವುದಿಲ್ಲ. ಅಹಂಭಾವಯುಕ್ತರಾಗಿರುವರು. ಜೀವನದಲ್ಲಿ ಸ್ಥಿರತೆಯುಳ್ಳವರಾಗುವುದಿಲ್ಲ. ಏಕಾದಶದ ಶುಕ್ರನು ದ್ವಿಸ್ವಭಾವ ರಾಶಿಗಳಲ್ಲಿದ್ದರೆ ಉತ್ತಮ ಫಲ ಕೊಡುವುದಿಲ್ಲ. ಮೀನದ ಶುಕ್ರನು ದ್ವಿಸ್ವಭಾವ ರಾಶಿಗಳಲ್ಲಿ ಸಾಮಾನ್ಯ ಶುಭಫಲದವನು. ಅನ್ಯ ರಾಶಿಯವನಲ್ಲ. ಶುಕ್ರನನ್ನು ರವಿಯ ಸಂಪರ್ಕವನ್ನು ನೋಡಿ ಫಲ ಬೋಧನೆಗೊಳ್ಳುವುದು ಉಚಿತ.

—— [ಸಶೇಷ]

ತಾ. 1—4—1962ರಿಂದ
ಬದಲಾವಣೆಗೊಂಡ
**ರೈಲ್ವೇ ಸವಾರಿಯು**

**ಮಂಗಳೂರಿಂದ ಹೊರಡುವ ಬಂಡಿಗಳು**

1 ಮಂಗಳೂರು–ಕಣ್ಣಾನೂರು ಪೆಸೆಂಜರ್—ಬೆಳಿಗ್ಗೆ 5-00
2 ಮಂಗಳೂರು–ಮದ್ರಾಸ್ ಮೈಲ್ —ಬೆಳಿಗ್ಗೆ 9-30
3 ಮಂಗಳೂರು–ಕಲ್ಲಿಕೋಟೆ ಪೆಸೆಂಜರ್—ಮಧ್ಯಾಹ್ನ 1-00
4 ಮಂಗಳೂರು–ಕಾಸರಗೋಡು ಪೆಸೆಂಜರ್—ಸಾಯಂ. 5-30
5 ಮಲಬಾರ್ ಎಕ್ಸ್‌ಪ್ರೆಸ್ —ಸಾಯಂ. 6-50

**ಮಂಗಳೂರಿಗೆ ತಲಪುವುದು**

1 ಕಣ್ಣಾನೂರು–ಮಂಗಳೂರು ಪೆಸೆಂಜರ್—ಬೆಳಿಗ್ಗೆ 9-20
2 ಮಲಬಾರ್ ಎಕ್ಸ್‌ಪ್ರೆಸ್ —ಬೆಳಿಗ್ಗೆ 11-50
3 ಮದ್ರಾಸ್–ಮಂಗಳೂರು ಮೈಲ್ ಮಧ್ಯಾಹ್ನ 3-45
4 ಕಲ್ಲಿಕೋಟೆ–ಮಂಗಳೂರು ಪೆಸೆಂಜರ್—ಸಾಯಂ. 5-30
5 ಕೊಚ್ಚಿನ್–ಮಂಗಳೂರು ಪೆಸೆಂಜರ್—ರಾತ್ರಿ 10-25

# ಈ ವಾರದ ಭವಿಷ್ಯ

ಶ್ರೀ ಎಮ್. ಸುಬ್ರಾಯರ್,
ಸಾಹಿತ್ಯ ಮತ್ತು ಜ್ಯೋತಿಷ್ಯ ಶಿರೋಮಣಿ.
ತಾರೀಕು ೨—೯—೧೯೬೨ರಿಂದ
ತಾ. ೮—೯—೧೯೬೨.

**ಮೇಷ:** ಸಂಪತ್ತಿನಿಂದ ಸುಧಾರಣೆಯನ್ನು ಹೊಂದಲಿರುವ ಸಂಘಟನೆಯು ಕಂಡುಬರುವುದು. ಪುಣ್ಯ ಕೆಲಸಗಳಿಗೆ ಕೈಯನ್ನು ನೀಡಲಿರುವಿರಿ. ವ್ಯಾಪಾರಿಗಳು ಉನ್ನತಿಯಿಂದ ಕೂಡಿದವರಾಗುವರು. ಪ್ರಯಾಣವಿದೆ.

**ವೃಷಭ:** ಹಲವಾರು ವಿಚಾರಗಳಿಂದ ಕೂಡಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ಪ್ರಯಾಣವಿದೆ.

**ಮಿಥುನ:** ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಾಣುವರು. ಕುಟುಂಬೀಯರ ಅಗಲುವಿಕೆಯನ್ನು ಹೊಂದಲಿರುವಿರಿ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕತೆಯಿಂದ ಕೂಡಿದವರಾಗಬೇಕು. ವಾಸಸ್ಥಾನದ ಬದಲಾವಣೆ ಇದೆ.

**ಕರ್ಕಟಕ:** ಉತ್ತಮ ವಿಚಾರಕರ್ಮಗಳಿಂದ ಕೂಡಿದವರಾಗಿದ್ದು ಅದನ್ನು ಕಾರ್ಯರೂಪದಲ್ಲಿ ಸಾಧಿಸಲಿರುವಿರಿ. ಕುಟುಂಬದಲ್ಲಿ ಶುಭಕೆಲಸಗಳಾಗಲಿರುವವು. ವಿದ್ಯಾಜೀವನದವರು ಪ್ರಗತಿಯುಳ್ಳವರಾಗುವರು. ನೌಕರರಿಗುತ್ತಮ.

**ಸಿಂಹ:** ಜೀವನದಲ್ಲಿ ನವೀನತೆಗಿರುವ ಸಂಪರ್ಕಯುಕ್ತರಾಗುವಿರಿ. ಬಂಧುಜನರ ವಿಯೋಗವನ್ನು ಹೊಂದಲಿರುವಿರಿ. ಕುಟುಂಬೀಯರಿಂದ ಶಾಂತಿಯುಂಟಾಗಲಾರದು. ನೌಕರರಿಗೆ ಉನ್ನತಿಯಾಗಲಿರುವುದು.

**ಕನ್ಯಾ:** ಸಾಮಾಜಿಕ ವಿಷಯಗಳಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ಕುಟುಂಬದಲ್ಲಿ ಶುಭಕೆಲಸಗಳು ನಡೆಯುಲಿರುವವು. ದೂರಗತ ಬಂಧುಜನರ ಸುಖವಾರ್ತೆಯನ್ನು ಹೊಂದಲಿರುವಿರಿ. ನೌಕರರಿಗೆ ಅಭಿವೃದ್ಧಿ ಇದೆ.

**ತುಲಾ:** ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಂಡುಬರುವರು. ಧಾರ್ಮಿಕ ವಿಷಯದಲ್ಲಿ ಆಸಕ್ತಿಯು ಉಂಟಾಗಲಿರುತ್ತದೆ. ದೇಹಾರೋಗ್ಯದ ನೆಲೆಯು ಉತ್ತಮವಾಗಿರುವುದಿಲ್ಲ. ವ್ಯಾಪಾರಿಗಳಿಗೆ ಶುಭಕರ.

**ವೃಶ್ಚಿಕ:** ಧಾರ್ಮಿಕ ವಿಷಯದಲ್ಲಿ ಆಸಕ್ತಿಯುಳ್ಳವರಾಗುವಿರಿ. ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಂಡುಬರುವರು. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಿ. ವ್ಯಾಪಾರಿಗಳಿಗೆ ಉನ್ನತಿಯು ಇದೆ.

**ಧನು:** ಕೆಲಸಗಳೆಲ್ಲಾ ಅಪೂರ್ಣಗಳಾಗಿರತ್ತವೆ. ಪುಣ್ಯವಿಚಾರಗಳಲ್ಲಿ ಆಸಕ್ತಿಯನ್ನು ಹೊಂದಲಿರುವಿರಿ. ವಿದ್ಯಾಜೀವನದವರು ಅಭಿವೃದ್ಧಿಗೊಳ್ಳಲಿರುವರು. ವಾಸಸ್ಥಾನದ ಬದಲಾವಣೆಯಾಗಲಿರುವುದು

**ಮಕರ:** ಮಾನಸಿಕ ಶಾಂತಿಯು ಕಡಮೆಯಾಗಿರುತ್ತದೆ. ಸಂಪತ್ತಿನ ಅಭಿವೃದ್ಧಿಗಿರುವ ಸಂಪರ್ಕಯುಕ್ತರಾಗಿ ಕಾಣುವಿರಿ. ದೇಹಾರೋಗ್ಯದ ನೆಲೆ ಚೆನ್ನಾಗಿರುವುದಿಲ್ಲ. ಆಕಸ್ಮಿಕ ಘಟನೆಗಳಿವೆ.

**ಕುಂಭ:** ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಾಣುವರು. ಸಂಪತ್ತಿನಿಂದ ಉನ್ನತಿಯನ್ನು ಹೊಂದಲಿರುವಿರಿ. ಪುಣ್ಯಕಾರ್ಯಗಳಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ದೇಹಾರೋಗ್ಯದ ನೆಲೆಯು ಉತ್ತಮವಾಗಿರುವುದಿಲ್ಲ.

**ಮೀನ:** ಮಾನಸಿಕ ಶಾಂತಿಯು ಕಡಮೆ. ಹೊಸ ವಿಚಾರಗಳಿಂದ ಕೂಡಿದವರಾಗುವಿರಿ. ಸಂಪತ್ತಿನಿಂದ ಪ್ರಗತಿಯನ್ನು ಹೊಂದಲಿರುವಿರಿ. ವಾಸಸ್ಥಾನದ ಬದಲಾವಣೆಯು ಸಂಭವಿಸಲಿರುತ್ತದೆ. ಪ್ರಯಾಣವಾಗಲಿದೆ.

——

# ವಾರದ ಪ್ರಭಾತ ಪಂಚಾಂಗ


ಸಿಂಹ, ಭಾದ್ರಪದ–ಶುಕ್ಲ


| ತಾರೀಕು | ವಾರ | ತಿಥಿ | | ನಿತ್ಯ ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ಮಹಾನಕ್ಷತ್ರ |
|---|---|---|---|---|---|---|---|---|---|
| | | ಸೌರ | ಚಾಂದ್ರ | | | | | | |
| 2 | ರವಿ | ೧೭ | ತ ೩೩\|\|\| | ಹ ೩೦ | ಶು ೧೬ | ಗ ೨೩\|\|\| | ೫೨\|\| | ೧೩\| | ಪೂಬ್ಬಾ ೯\|\| |
| 3 | ಚಂದ್ರ | ೧೮ | ಚೌ ೩೦ | ಚಿ ೩೭\| | ಶ್ಲ ೧೮\|\|\| | ಭ ೩ | ೫೯ | ೧೯\| | ೧೩\|\| |
| 4 | ಕುಜ | ೧೯ | ಪ ೩೫\|\| | ಸ್ವಾ ೪೪\| | ಬ್ರ ೨೦\|\|\| | ಬ ೨\|\|\| | ೫೯ | ೧೯\|\|\| | ೧೮\| |
| 5 | ಬುಧ | ೨೦ | ಷ ೪೦\| | ವಿ ೫೦\| | ವಿ ೨೨\| | ಕೌ ೭\|\|\| | ವಿಶೇಳ | ೨೬ | ೨೨\|\| |
| 6 | ಗುರು | ೨೧ | ಸ ೪೩\|\| | ಅ ೫೪\|\|\| | ವೈ ೨೨\|\|\| | ಗ ೧೨ | ೧ | ೨೬\|\|\| | ೨೭ |
| 7 | ಶುಕ್ರ | ೨೨ | ಅ ೪೫\|\| | ಜ್ಯೇ ೫೮ | ವಿ ೨೨ | ಭ ೧೪\|\| | ೯\|\| | ೩೪\|\|\| | ೩೧\| |
| 8 | ಶನಿ | ೨೩ | ನ ೪೫\|\| | ಮೂ ೫೯ | ಪ್ರೀ ೨೦ | ಬಾ ೧೫ | ೧೮\| | ೪೨\|\|\| | ೩೫\|\|\| |

ರವಿವಾರ ಗೌರೀತೃತೀಯಾ; ಸೋಮವಾರ ಗಣೇಶಚತುರ್ಥಿ; ಕುಜವಾರ ಋಷಿಪಂಚಮಿ.







# ರಜತರಂಗ

## ತಾಯಿಕರುಳು ಪೂರ್ಣಗೊಂಡಿದೆ

ಜಿ. ವಿ. ಅಯ್ಯರ್ ಪ್ರೊಡಕ್ಷನ್ಸ್‌ರವರ ಪ್ರಥಮ ಕನ್ನಡ ಚಿತ್ರ "ತಾಯಿಕರುಳು" ಸಂಪೂರ್ಣಗೊಂಡಿದೆ. ಬಂಗಾಳಿ ನಾಟಕವೊಂದರ ಆಧಾರದ ಮೇಲೆ ತಯಾರಾದ ಈ ಚಿತ್ರದಲ್ಲಿ ಉದಯಕುಮಾರ್, ಲೀಲಾವತಿ, ಕಲ್ಯಾಣಕುಮಾರ್, ಎಂ. ವಿ. ರಾಜಮ್ಮ, ಅಶ್ವಥ್, ಹೊಸ ತಾರೆ ಮಂದನಾ, ನರಸಿಂಹರಾಜು, ಬಾಲಕೃಷ್ಣ ತಾರಾಗಣದಲ್ಲಿರುವರು. ಜಿ. ಕೆ. ವೆಂಕಟೇಶ್ ಸಂಗೀತವನ್ನು ನೀಡಿರುವರು. ಸಂಭಾಷಣೆ—ನಿರ್ದೇಶನಗಳನ್ನು ಜಿ. ವಿ. ಅಯ್ಯರ್ ನಿರ್ವಹಿಸುವರು. ಮೆಜೆಸ್ಟಿಕ್ ಸ್ಟುಡಿಯೋದಲ್ಲಿ ತಯಾರಾದ ಈ ಚಿತ್ರವು ಸೆಪ್ಟೆಂಬರ್ ತಿಂಗಳಲ್ಲಿ ಪ್ರದರ್ಶನಕ್ಕೆ ಬರುವುದು.

ಈ ವಾರ

### ಮಂಗಳೂರಿನ ಚಿತ್ರಮಂದಿರಗಳಲ್ಲಿ

ಸೆಂಟ್ರಲ್ 2ನೇ ವಾರ

**ಮಾಯಾ**
(ಹಿಂದಿ)
ದೇವಾನಂದ್—ಮಾಲಾಸಿನ್ಹಾ—ಆಗಾ.
ದಿನಂಪ್ರತಿ 3 ದೇಖಾವೆಗಳು.

ಜ್ಯೋತಿ 31—8—62ರಿಂದ

**ಪಡಿತ್ತಾಲ್ ಮಟ್ಟುಂ ಪೋದುಮಾ** (ತಮಿಳು)
ಶಿವಾಜಿಗಣೇಶನ್—ಸಾವಿತ್ರಿ.
ದಿನಂಪ್ರತಿ 3 ದೇಖಾವೆಗಳು.

ರೂಪವಾಣಿ 30—8—62ರಿಂದ

**ರೂಪ್ ಕಿ ರಾಣಿ ಚೋರೋಂ ಕಾ ರಾಜಾ** (ಹಿಂದಿ)
ದೇವಾನಂದ್—ವಹಿದಾ ರೆಹಮಾನ್.
ದಿನಂಪ್ರತಿ 3 ದೇಖಾವೆಗಳು.

ಪ್ರಭಾತ್ 2ನೇ ವಾರ

**ಕಾತ್ತಿರುಂದ ಕಣ್ಗಳ್**
(ತಮಿಳು)
ಸಾವಿತ್ರಿ—ಆರ್. ಗಣೇಶನ್ – ರಂಗರಾವ್.
ದಿನಂಪ್ರತಿ 3 ದೇಖಾವೆಗಳು.

ರಾಮಕಾಂತಿ 31—8—62ರಿಂದ

**ಭಲೇ ಪಾಂಡ್ಯ**
(ತಮಿಳು)
ಶಿವಾಜಿ ಗಣೇಶನ್—ಎಂ. ಆರ್. ರಾಧಾ.
ದಿನಂಪ್ರತಿ 3 ದೇಖಾವೆಗಳು.

BALAJI FROM 31—8—62

**SNOW WHITE & 3 STOOGES**
CINEMASCOPE—DELUXE COLOR
DAILY 3 SHOWS.

ನ್ಯೂ ಚಿತ್ರಾ 31—8—62ರಿಂದ

**ಸ್ಟೇಟ್ ಎಕ್ಸ್‌ಪ್ರೆಸ್**
(ಹಿಂದಿ)
ಜಯರಾಜ್—ಕೃಷ್ಣಕುಮಾರಿ.
ದಿನಂಪ್ರತಿ 3 ದೇಖಾವೆಗಳು.

## ನರ್ತಕಿ

ಸುನೀಲ್‌ದತ್, ನಂದಾ, ಓಂಪ್ರಕಾಶ್, ಆಗಾ, ಕಮ್ಮೋ ಮೊದಲಾದವರು ಫಿಲ್ಮ್‌ಭಾರತಿ ಪಿಕ್ಚರ್ಸ್‌ರವರ "ನರ್ತಕಿ" ಚಿತ್ರಕ್ಕಾಗಿ ನಡೆದ ಏಳು ದಿನಗಳ ಚಿತ್ರೀಕರಣದಲ್ಲಿ ಭಾಗವಹಿಸಿದ್ದರು. ಚಿತ್ರೀಕರಣವು ಮುಂಬಯಿಯ ರೂಪತಾರಾ ಮತ್ತು ರಣಜಿತ್ ಸ್ಟುಡಿಯೋಗಳಲ್ಲಿ ನಡೆಯಿತು.

"ನರ್ತಕಿ"ಯನ್ನು ನಿತಿನ್ ಬೋಸ್ ದಿಗ್ದರ್ಶಿಸುತ್ತಿದ್ದು, ಧ್ರುವ ಚಟರ್ಜಿಯವರು ಚಿತ್ರನಾಟಕವನ್ನು ರಚಿಸಿರುವರು. ಶಕೀಲ್ ಬದಾಯುನಿ ಬರೆದಿರುವ ಗೀತೆಗಳಿಗೆ ರವಿ ಸಂಗೀತವನ್ನು ನೀಡುವರು. ಮುಕುಂದ ತ್ರಿವೇದಿ ನಿರ್ಮಾಪಕರು.

## ದಿಲೀಪ್‌ಕುಮಾರ್—ವಹೀದಾ ರೆಹಮಾನ್

ದಿಲೀಪ್‌ಕುಮಾರ್ ಮತ್ತು ವಹೀದಾ ರೆಹಮಾನ್ ಪ್ರಧಾನ ಪಾತ್ರವರ್ಗದಲ್ಲಿರುವ ಕೇ ಪ್ರೊಡಕ್ಷನ್ಸ್‌ರವರ ಮೊದಲನೇ ಚಿತ್ರವು ಈ ತಿಂಗಳಾಂತ್ಯದಲ್ಲಿ ಸೆಟ್ಟನ್ನೇರುವುದು. ಎ. ಕರ್ದಾರರಿಂದ ದಿಗ್ದರ್ಶಿಸಲ್ಪಡುವ ಈ ವರ್ಣಚಿತ್ರಕ್ಕೆ ಶಕೀಲ್ ಬದಾಯುನಿ ಗೀತೆಗಳನ್ನು ರಚಿಸುವರು. ನೌಷದ್ ಅಲಿ ಸಂಗೀತವನ್ನು ನೀಡುವರು.

ಚಿತ್ರದ ಸಹಾಯಕ ತಾರಾಗಣದಲ್ಲಿ ಶ್ಯಾಮಾ, ರೆಹಮಾನ್, ಜಾನಿವಾಕರ್ ಮತ್ತು ಪ್ರಾಣ್ ಇರುವರು.

## ಮದ್ರಾಸಿನಲ್ಲಿ ಚಿತ್ರಗಳ ಪೈಪೋಟಿ!

ಮದ್ರಾಸಿನಲ್ಲಿ ಕಳೆದ ತಿಂಗಳಲ್ಲಿ ಮತ್ತು ಈ ತಿಂಗಳ ಪ್ರಥಮ ವಾರದಲ್ಲಿ ಒಟ್ಟಿಗೆ ನಾಲ್ಕು ಚಿತ್ರಗಳು ಬಿಡುಗಡೆಗೊಂಡಿವೆ. ಇವುಗಳ ನಡುವೆ ತೀವ್ರ ಪೈಪೋಟಿ ನಡೆಯುವುದೆಂದು ಊಹಿಸಲಾಗಿದೆ. ಚಿತ್ರಗಳು ಇಂತಿವೆ:—

ದೇವರ್ ಫಿಲಮ್ಸ್‌ರವರ "ಕುಟುಂಬ ತಲೈವನ್". ತಾರಾಗಣದಲ್ಲಿ ಎಂ. ಜಿ. ರಾಮಚಂದ್ರನ್, ಸರೋಜಾದೇವಿ, ದೇವರ್, ಎಂ. ವಿ. ರಾಜಮ್ಮ ಮತ್ತು ಎಂ. ಆರ್. ರಾಧಾ ಇದ್ದಾರೆ. ನಿರ್ದೇಶಕರು ಎಂ. ಎ. ತಿರುಮುಗಂ.

ವಸುಮತಿ ಪಿಕ್ಚರ್ಸ್‌ರವರ "ಕಾತ್ತಿರುಂದ ಕಣ್ಗಳ್". ತಾರಾಗಣದಲ್ಲಿ ಜೆಮಿನಿ ಗಣೇಶನ್, ಸಾವಿತ್ರಿ, ಎಂ. ಆರ್. ರಾಧಾ ಇದ್ದಾರೆ. ನಿರ್ದೇಶಕರು ಟಿ. ಪ್ರಕಾಶರಾವ್.

ಆರ್. ಆರ್. ಪಿಕ್ಚರ್ಸ್‌ರವರ "ಪಾಶಂ". ತಾರಾಗಣದಲ್ಲಿ ಎಂ. ಜಿ. ರಾಮಚಂದ್ರನ್, ಸರೋಜಾದೇವಿ, ಎಂ. ಆರ್. ರಾಧಾ, ಕಲ್ಯಾಣಕುಮಾರ್ ಮತ್ತು ಅಶೋಕನ್ ಇದ್ದಾರೆ. ನಿರ್ದೇಶಕರು ಟಿ. ಆರ್. ರಾಮಣ್ಣ.

ಅಂಜಲಿ ಪಿಕ್ಚರ್ಸ್ "ಮಂಗೈಯರ್ ಉಳ್ಳಂ ಮಂಗಾದ ಸೆಲ್ವಮ್". ತಾರಾಗಣದಲ್ಲಿ ಜೆಮಿನಿ ಗಣೇಶನ್, ಅಂಜಲಿ, ಎಂ. ಆರ್. ರಾಧಾ ಮತ್ತು ತಂಗವೇಲು ಇದ್ದಾರೆ. ನಿರ್ದೇಶಕರು ವೇದಾಂತಂ ರಾಘವಯ್ಯ.

## ಕೌನ್ ಅಪನಾ ಕೌನ್ ಪರಾಯಾ

"ಕೌನ್ ಅಪನಾ ಕೌನ್ ಪರಾಯಾ" ಚಿತ್ರಕ್ಕಾಗಿ ನೈನಿತಾಲದಲ್ಲಿ ಅಕ್ಟೋಬರ ತಿಂಗಳಲ್ಲಿ ಹೊರಾಂಗಣ ಚಿತ್ರೀಕರಣದ ಯೋಜನೆಯನ್ನು ನಿರ್ಮಾಪಕರಾದ ಗೋಲ್ಡನ್ ಫಿಲಮ್ಸ್‌ರವರು ಮಾಡಿರುವರು. ಈಗಾಗಲೇ ಈ ಚಿತ್ರಕ್ಕಾಗಿ ಕೆಲವು ದಿನಗಳ ಹಿಂದೆ ಮತ್ತೆ ಏಳು ದಿನಗಳ ಶೂಟಿಂಗ್ ನಡೆದಿದೆ. ಅದರಲ್ಲಿ ನಾಯಕ ವಿಜಯಕುಮಾರ್ ಮತ್ತು ನಾಯಕಿ ವಹೀದಾ ರೆಹಮಾನ್ ಭಾಗವಹಿಸಿದ್ದರು. ನಿರೂಪಾರಾಯ್ ಮತ್ತು ಜಾನಿವಾಕರ್ ಚಿತ್ರದಲ್ಲಿ ಮಹತ್ವದ ಇತರ ಪಾತ್ರಗಳಲ್ಲಿದ್ದಾರೆ.

ಶಕೀಲ್ ಬದಾಯುನಿ ಗೀತಕಾರರು. ರವಿ ಸಂಗೀತವನ್ನು ನೀಡಿದ್ದಾರೆ. ನಿರಂಜನ್ ದಿಗ್ದರ್ಶನವನ್ನು ನಿರ್ವಹಿಸುತ್ತಿದ್ದಾರೆ.

## ಸುಬ್ಬಯ್ಯ ನಾಯ್ಡುರವರ ಭಾವಚಿತ್ರ ಅನಾವರಣ

ಕನ್ನಡ ನಾಟಕರಂಗ ಮತ್ತು ಚಿತ್ರರಂಗಗಳಲ್ಲಿ ಅವಿಶ್ರಾಂತ ದುಡಿದು, ಇತ್ತೀಚೆಗೆ ದಿವಂಗತರಾದ ನಟಶ್ರೇಷ್ಠ ಸುಬ್ಬಯ್ಯ ನಾಯ್ಡುರವರ ಭಾವಚಿತ್ರ ಅನಾವರಣ ಸಮಾರಂಭವು ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಭವನದಲ್ಲಿ ಜರಗಿತು. ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಭಾವಚಿತ್ರವನ್ನು ಅನಾವರಣಮಾಡಿದರು. ಹನುಮಂತಯ್ಯನವರು ಮಾತನಾಡುತ್ತಾ, ಕಲಾವಿದರನ್ನು ಯೋಗ್ಯ ರೀತಿಯಲ್ಲಿ ಗೌರವಿಸುವುದು ಸರಕಾರದ ಮತ್ತು ಜನತೆಯ ಹೊಣೆಗಾರಿಕೆಯೆಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರು ವಹಿಸಿದ್ದರು.

## ಚಿತ್ರೀಕರಣದ ಪುನರಾರಂಭ

ಐದು ದಿನಗಳ ಚಿತ್ರೀಕರಣ ಕಾರ್ಯಕ್ರಮದೊಡನೆ ಕಿಶೋರ್‌ಕುಮಾರನ ಸ್ವಂತ ತಯಾರಿಕೆಯಾದ "ದೂರ್ ಗಗನ್ ಕಿ ಛಾವೋ ಮೇ"ಯ ಚಿತ್ರೀಕರಣವು ಆರಂಭವಾಗಿದೆ. ಕೆಲವು ಸಮಯ ಈ ಚಿತ್ರದ ಕೆಲಸವು ನಿಂತು ಹೋಗಿತ್ತು.

ಚಿತ್ರೀಕರಣದಲ್ಲಿ ಕಿಶೋರ್‌ಕುಮಾರ್, ಶಶಿಕಲಾ, ಸಜ್ಜನ್ ಮೊದಲಾದವರು ಭಾಗವಹಿಸಿದ್ದರು. ಚಿತ್ರದ ನಾಯಿಕೆಯ ಪಾತ್ರದಲ್ಲಿ ಸುಪ್ರಿಯಾ ಚೌಧರಿ ಇದ್ದಾಳೆ. ಚಿತ್ರದ ಸಾಹಿತ್ಯ ನಿರ್ದೇಶನ ಮತ್ತು ಸಂಗೀತ ಎಲ್ಲವೂ ಕಿಶೋರ್‌ಕುಮಾರನದು. ಕಿಶೋರ್‌ಕುಮಾರನ ಪುತ್ರ ಅಮಿತ್ ಈ ಚಿತ್ರದಲ್ಲಿ ಪ್ರಧಾನ ಪಾತ್ರವೊಂದರಲ್ಲಿದ್ದಾನೆ.

## ಸ್ವಾರಸ್ಯ ಘಟನೆ

**ದೇವ್ ಆನಂದ್ ನ್ಯೂಯೋರ್ಕಿನಲ್ಲಿ ಭಾರತೀಯ ಉಪಾಹಾರಗೃಹವೊಂದರಲ್ಲಿ ಊಟಕ್ಕೆ ಕುಳಿತಿದ್ದಾಗ ಥಟ್ಟನೆ ಅಲ್ಲಿ ಭಾರತೀಯ ಹಾಡೊಂದನ್ನು ಕೇಳಿ ಚಕಿತನಾದನು.** ಹಾಡೂ ಪರಿಚಿತವಾದುದೇ ಆಗಿತ್ತು. ಆ ಹಾಡನ್ನು ಇಪ್ಪತ್ತೈದು ವರ್ಷಗಳ ಹಿಂದೆ ಬಿಡುಗಡೆಗೊಂಡಿದ್ದ ಹಿಂದಿ ಚಿತ್ರವೊಂದರಲ್ಲಿ ಅಶೋಕ್ ಕುಮಾರ್ ಹಾಡಿದ್ದನು. ಭಾರತಕ್ಕೆ ಮರಳಿದ ದೇವ್ ಆನಂದ್ ಆ ಹಾಡನ್ನು ಜ್ಞಾಪಿಸಿ ಹೊಟ್ಟೆತುಂಬಾ ನಗುತ್ತಾನೆ. ಆ ವಿಷಯವನ್ನು ಅಶೋಕ್‌ನೊಡನೆ ಹೇಳದೆ ದೇವ್‌ನಿಗೆ ಮನಸ್ಸಮಾಧಾನವಿಲ್ಲವಂತೆ!

## ಹೊಸ ಕನ್ನಡ ಚಿತ್ರದ ಬಿಡುಗಡೆ

ಶೈಲಶ್ರೀ ಪಿಕ್ಚರ್ಸ್‌ರವರ ಪ್ರಥಮ ಕನ್ನಡ ಚಿತ್ರ "ಕರುಣೆಯೇ ಕುಟುಂಬದ ಕಣ್ಣು" ಸಂಪೂರ್ಣಗೊಂಡಿದ್ದು ಸೆಪ್ಟಂಬರ ತಿಂಗಳಲ್ಲಿ ಬಿಡುಗಡೆಯಾಗುವುದು. ಈ ಚಿತ್ರದಲ್ಲಿ ರಾಜಕುಮಾರ್, ಲೀಲಾವತಿ, ಉದಯಕುಮಾರ್ ಮೊದಲಾದವರು ನಟಿಸಿದ್ದಾರೆ. ಜಿ. ಕೆ. ವೆಂಕಟೇಶ್ ಸಂಗೀತವನ್ನು ನೀಡಿದ್ದಾರೆ.

– K. S. S.



Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K.V.Shenoy.